ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ದಕ್ಷಿಣ ಕನ್ನಡದ ಕಾರ್ನಾಡು ಸದಾಶಿವರಾವ್‌ರವರ ಪಾತ್ರ

ಪಿಎಚ್.ಡಿ ಸಂಶೋಧನಾ ಪ್ರಬಂಧ ಮಂಡನಾ ಅಂತಿಮ ಸಾರಲೇಖ ಸಲ್ಲಿಕೆ

ರಂಜಿತಾ ಯಂ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ

ಡಾ। ತ್ರಿವೇಣಿ
ಮಾರ್ಗದರ್ಶಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ

ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ

ಪೀಠಿಕೆ:

ಭಾರತದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಆರಂಭದಲ್ಲಿ ಸೀಮಿತ ಪ್ರದೇಶಗಳಿಗೆ, ಸಂಸ್ಥಾನಗಳಿಗೆ ಸೀಮಿತವಾಗಿ ಕ್ರಮೇಣ ಅದು ಭಾರತದ ಮೂಲೆ ಮೂಲೆಗೂ ವಿಸ್ತಾರಗೊಂಡು ರಾಷ್ಟ್ರೀಯತೆಯ ರೂಪು ರೇಷೆಗಳನ್ನು ಒಳಗೊಂಡು ಪ್ರತಿಯೊಬ್ಬ ಭಾರತೀಯನ ಹೋರಾಟವಾಗಿ ಪರಿಣಮಿಸಿತು. ಭಾರತ ಸ್ವಾತಂತ್ರ್ಯ ಹೋರಾಟವು ಸುವರ್ಣ ಅಕ್ಷರಗಳಲ್ಲಿ ದಾಖಲಾಗಿರುವಂತಹ ಚಾರಿತ್ರಿಕ ಘಟನೆಯಾಗಿದೆ. ತ್ಯಾಗ, ಬಲಿದಾನಗಳ ಪ್ರತೀಕತೆಯನ್ನು ಹೊಂದಿದ ಭಾರತ ಸ್ವಾತಂತ್ರ್ಯ ಚಳುವಳಿಯು ಆಧುನಿಕ ಸಮಾಜದಲ್ಲಿ ನಡೆದ ಅವಿಸ್ಮರಣೀಯ ಹೋರಾಟವಾಗಿದೆ. ಭಾರತ ಸ್ವಾತಂತ್ರ್ಯ ಚಳುವಳಿಯು ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಉಳಿದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಉಂಟು ಮಾಡಿದ ಪರಿಣಾಮಗಳೇನು? ಈ ಪರಿಣಾಮಗಳು ಶಾಶ್ವತವಾದವುಗಳೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಚಳುವಳಿಯ ವ್ಯಾಪ್ತಿಯನ್ನು ಅರಿಯುವುದು ಉತ್ತರವಾಗುತ್ತದೆ.

ಕ್ರಿ.ಶ. 1498 ರಿಂದ ವಿದೇಶಿಯರು ವ್ಯಾಪಾರದ ಉದ್ದೇಶವನ್ನಿಟ್ಟುಕೊಂಡು ಭಾರತಕ್ಕೆ ಆಗಮಿಸಿ, ಭಾರತ ನೆಲದಲ್ಲಿಯೇ ಬೇರೂರಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಸಫಲರಾದ ಬ್ರಿಟಿಷರು ಕ್ರಿ.ಶ. 1600 ರಲ್ಲಿ ಭಾರತದೊಂದಿಗೆ ವ್ಯಾಪಾರ ನಡೆಸುವ ಒಪ್ಪಂದವನ್ನು ಪಡೆದು, ಕಾಲ ಕ್ರಮೇಣ ಭಾರತದ ಪ್ರಮುಖ ನಗರಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ, ಭಾರತದ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವುದರ ಜೊತೆಗೆ ಪ್ರಾದೇಶಿಕ ವ್ಯವಸ್ಥೆಯನ್ನೂ ನಿಯಂತ್ರಿಸಿದರು. ಭಾರತದ ರಾಜ್ಯಗಳನ್ನು ಚಾಣಕ್ಷತೆಯಿಂದಲೋ ಅಥವಾ ಬಲಪ್ರಯೋಗದಿಂದಲೋ ತಮ್ಮ ಪರಮಾಧಿಕಾರಕ್ಕೆ ಒಳಪಡಿಸಿದರು. ಬ್ರಿಟಿಷ್ ವ್ಯಾಪಾರಿಗಳ ನಿರಂಕುಶ ಮಾರ್ಗಗಳ ಫಲವಾಗಿ ಭಾರತದ ಕೈಗಾರಿಕೆಗಳು, ಕೈಕಸುಬಿನ ಉದ್ಯೋಗಗಳು ನಾಶವಾದವು. ರೈತರ ಮೇಲಿನ ದಬ್ಬಾಳಿಕೆ, ಜನ ಸಾಮಾನ್ಯರ ಮೇಲಿನ ಶೋಷಣೆ, ಕಂದಾಯ ವಸೂಲಿ ಮುಂತಾದ ಕ್ರಮಗಳ ಮೂಲಕ ಬ್ರಿಟಿಷರು ಭಾರತವನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡರು. ಇಂತಹ ಸಂದರ್ಭದಲ್ಲಿ ಭಾರತದ ಎಲ್ಲಾ ವರ್ಗದ ಜನರು ತಮಗೆ ಅರಿತೋ, ಅರಿಯದೆಯೋ ಬ್ರಿಟಿಷರ ನೀತಿಯ ವಿರುದ್ಧ ಪ್ರತಿಭಟನೆ ನಡೆಸಿ, ಸಂಘಟನಾ ರಹಿತವಾಗಿ ಪ್ರಾರಂಭವಾದ ಹೋರಾಟವು ಕ್ರಮೇಣ ವ್ಯವಸ್ಥಿತವಾಗಿ ನಡೆದು, ನಂತರದಲ್ಲಿ ಸ್ಥಳೀಯ, ಪ್ರಾದೇಶಿಕ

ಮಟ್ಟದ ಹೋರಾಟಗಳು ಪ್ರಾರಂಭವಾಯಿತು. ನಮ್ಮ ಸ್ವಾತಂತ್ರ್ಯವನ್ನು ಹರಣ ಮಾಡಿದ ಪರಕೀಯರ ಮೇಲೆ ಭಾರತೀಯರು ಸಿಡಿದೇಳುವ ಪ್ರಮೇಯ ಹುಟ್ಟಿಕೊಂಡಿತು.[1]

ಭಾರತೀಯ ರಾಷ್ಟ್ರೀಯ ಚಳುವಳಿಯ 19ನೇ ಶತಮಾನದ ಉತ್ತರಾರ್ಧದಲ್ಲಿ ಒಂದು ಸ್ವರೂಪವನ್ನು ಕಂಡುಕೊಂಡರೂ, ಇದಕ್ಕೆ ಒಂದು ಶತಮಾನದಷ್ಟು ಮೊದಲೇ ದೇಶದ ವಿವಿಧ ಕಡೆಗಳಲ್ಲಿ ಹೋರಾಟಗಳು, ಚಳುವಳಿಗಳು ನಡೆಯುತ್ತಲೇ ಇದ್ದವು. ಬಂಗಾಳ, ಹೈದರಬಾದ್, ಔಧ್, ಕರ್ನಾಟಕದ ಮೈಸೂರು ಸಂಸ್ಥಾನಗಳಲ್ಲಿ ಬ್ರಿಟಿಷರ ವಿರುದ್ಧ ಹೋರಾಟಗಳು ನಡೆದಿರುವುದು ಕಂಡುಬರುತ್ತದೆ. ಸ್ಥಳೀಯ ರೈತರ ದಂಗೆಗಳು, ಕಾರ್ಮಿಕರ ದಂಗೆಗಳು, ಬುಡಕಟ್ಟು ಜನಾಂಗದವರ ಹೋರಾಟಗಳು ವಸಹಾತು ವಿರೋಧಿ ಚಳುವಳಿಗಳಾಗಿವೆ. ಬಹಳ ಪ್ರಬಲವಾದ ಮತ್ತು ವ್ಯಾಪ್ತಿಯುಳ್ಳ ವಸಾಹತು ವಿರೋಧಿ ಸಂವೇದನೆಗೆ ಸಂಬಂಧಿಸಿದಂತೆ ಬಹಳ ಶ್ರೀಮಂತ ಹಿನ್ನಲೆಯ ರೈತ ಪ್ರತಿಭಟನೆಗಳು ಸೂಕ್ತ ನಾಯಕತ್ವ ಇಲ್ಲದೇ ತೆರೆಮರೆಗೆ ಸರಿದವು. ಸ್ಥಳೀಯ ಹೋರಾಟಗಳಾಗಿಯೇ ಉಳಿದ ಈ ಪ್ರತಿಭಟನೆಗಳು ರಾಷ್ಟ್ರ ವಿಮುಕ್ತಿಗಾಗಿ ಒಂದು ಪ್ರಬಲವಾದ ಪೂರ್ಣ ಪ್ರಮಾಣದ ರಾಷ್ಟ್ರೀಯ ಚಳುವಳಿಯನ್ನು ರೂಪಿಸಲು ಸಾಧ್ಯವಾಗಲಿಲ್ಲ. ಇಂತಹ ಹೋರಾಟಗಳು ಕರ್ನಾಟಕದಲ್ಲಿಯೂ ನಡೆಯುತ್ತಲೇ ಬಂದವು.[2] ಗುಡ್ಡಗಾಡು ಜನರು, ಆದಿವಾಸಿಗಳು, ಸಾಮೂಹಿಕ ಚಳುವಳಿಗಳನ್ನು ನಡೆಸಿರುವುದರ ಬಗ್ಗೆ ಕೆಲವು ಸರಕಾರಿ ದಾಖಲೆಗಳಲ್ಲಿ ಉಲ್ಲೇಖವಾಗಿವೆ, ಹಲವು ಉಲ್ಲೇಖವಾಗಿಲ್ಲ. ಆದ್ದರಿಂದ ರಾಷ್ಟ್ರೀಯತೆಯ ಗಾಳಿ ಕರ್ನಾಟಕಕ್ಕೆ ಮೊದಲೇ ಬೀಸಿದೆ ಎನ್ನಬಹುದು. ಬ್ರಿಟಿಷರ ವಸಾಹತುಶಾಹಿಯ ವಿರುದ್ಧ ವಿರೋಧವನ್ನು ವ್ಯಕ್ತಪಡಿಸಿದ ಮೊದಲ ರಾಜ್ಯ ಕರ್ನಾಟಕ. ಕ್ರಿ.ಶ 1767–1799 ರಲ್ಲಿ ಹೈದರ್–ಟಿಪ್ಪು ಬ್ರಿಟಿಷರ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸಿದರು. ಅದೇ ರೀತಿ ಸಶಸ್ತ್ರ ಬಂಡಾಯಗಳು, ಧೊಂಡಿಯಾ ವಾಘ್ (1800), ಕೊಪ್ಪಳದ ಕ್ರಾಂತಿ (1819), 1830–31 ರ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಂತಹ ದಂಗೆಗಳು, ಕಲ್ಯಾಣಸ್ವಾಮಿ ದಂಗೆ, ಕಿತ್ತೂರಿನ ಹೋರಾಟ, ಕೊಡಗಿನಲ್ಲಿ ನಡೆದಂತಹ ಹೋರಾಟಗಳು ರಾಷ್ಟ್ರೀಯತೆಯ ಭಾವನೆಯನ್ನು ಸೃಷ್ಟಿಸಿ, ಕರ್ನಾಟಕದಲ್ಲಿ ಹೋರಾಟದ ಹಾದಿಗೆ ಬುನಾದಿಯನ್ನು ಹಾಕಿತು. ವೈವಿಧ್ಯಮಯ ರೀತಿಯ ಪರಿಸ್ಥಿತಿಯ ಜೊತೆಗೆ ಕನ್ನಡ ನಾಡಿನ ಪ್ರದೇಶಗಳು ಸಹಜವಾಗಿಯೇ ವಿವಿಧ ರೀತಿಯಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವು.

---

[1] Vasantha Madhava K.G,History of freedom movement in India(1857-1947),Navarang New Delhi,1995

[2] ಬಿಪನ್ ಚಂದ್ರ,(ಪ್ರ.ಸಂ),ಗೋಪಾಲರಾವ್ ಎಚ್.ಎಸ್(ಅನುವಾದ),ಆಧುನಿಕ ಭಾರತದ ಇತಿಹಾಸ,ನವ ಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ.ಬೆಂಗಳೂರು,2012

1857 ರ ಬಂಡಾಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಟದ ಸ್ವರೂಪ ಬದಲಾವಣೆಯನ್ನು ಕಂಡು ಹೊಸ ದಿಕ್ಕಿನಲ್ಲಿ ಸಾಗಿತು. ಸರಕಾರದ ಆಳ್ವಿಕೆಯ ಅಸಮಾಧಾನ, ಹಾಗೂ ಮೊದಲ ಹಂತದಲ್ಲಿ ನಡೆದಂತಹ ದಂಗೆಗಳ ಹೋರಾಟಗಳ ಯಶಸ್ಸುಗಳು ಸ್ವಾತಂತ್ರ್ಯ ಕಲ್ಪನೆಯ ಚೈತನ್ಯಗಳ ಸಮ್ಮಿಲನವಾಯಿತು. ಇದು ಭಾರತದ ವಿವಿಧ ವರ್ಗಗಳ ಪ್ರಥಮ ಸಾಮೂಹಿಕ ಹೋರಾಟ ಎಂದರೆ ತಪ್ಪಾಗಲಾರದು. ಈ ಕ್ರಾಂತಿಯು ವಿಫಲತೆಯನ್ನು ಕಂಡುಕೊಂಡರೂ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೊಸ ಮುನ್ನುಡಿಯನ್ನು ಬರೆಯಿತು. ಕಿತ್ತೂರು ಚೆನ್ನಮ್ಮ ಸಂಗೊಳ್ಳಿರಾಯಣ್ಣರು ಬ್ರಿಟಿಷರ ವಿರುದ್ಧ ನಡೆಸಿದ ಯುದ್ಧ, ಝಾನ್ಸೀ ರಾಣಿಲಕ್ಷ್ಮೀಬಾಯಿ ಮತ್ತು ತಾತ್ಯಾಟೋಪಿ ನಡೆಸಿದ ಹೋರಾಟ, ಬೇಗಂ ಹಜ್ರತ್ ಮಹಲ್, ಅಹಲ್ಯಾದೇವಿ ಬಾಯಿ ಹೋಳ್ಕಾರ್ ಅವರು ಸ್ವಾತಂತ್ರ್ಯ ಸಂಗ್ರಾಮಕ್ಕೆ ನೀಡಿದ ಕೊಡುಗೆಗಳು, ಇವರುಗಳ ತ್ಯಾಗ ಬಲಿದಾನಗಳು ಅವಿಸ್ಮರಣೀಯ. ಈ ಹೋರಾಟದ ತಳಹದಿಯು ಭಾರತೀಯರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಬೆಳೆಯುವಂತೆ ಮಾಡಿತು. ರಾಜಕೀಯ ಪ್ರಜ್ಞಾವಂತ ವ್ಯಕ್ತಿಗಳು ಒಟ್ಟಾಗಿ ರಾಜಕೀಯ ಚಟುವಟಿಕೆಗಳನ್ನು ನಡೆಸಿ, ಅಖಿಲ ಭಾರತೀಯ ಚಳುವಳಿಯನ್ನು ಪ್ರಾರಂಭಿಸಿ, ಭಾರತೀಯರಲ್ಲಿ ಒಗ್ಗಟ್ಟು ಮೂಡಿಸುವ ಪ್ರಯತ್ನವನ್ನು ಮಾಡಿದರು. ಈ ನಿಟ್ಟಿನಲ್ಲಿ ಹಲವಾರು ರಾಜಕೀಯ ಸಂಘಟನೆಗಳು ಸ್ಥಾಪನೆಗೊಂಡು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಹಾದಿಯಾಯಿತು. ಕಾಂಗ್ರೆಸ್ ಭಾರತದಲ್ಲಿ ಸಂವಿಧಾನಾತ್ಮಕ ಚಳುವಳಿಯನ್ನು ಮುಂದುವರಿಸುತ್ತಾ ದೇಶದ ನಾನಾ ಭಾಗಗಳಲ್ಲಿ ರಾಷ್ಟ್ರೀಯತೆಯ ಹೊಸ ವಾತಾವರಣ ಸೃಷ್ಟಿ ಮಾಡಿತು.[3] ಕರ್ನಾಟಕವು ಕಾಂಗ್ರೆಸ್‌ನ ಅಧಿವೇಶನದ ಭಾಗವಾಗಿ ಪಾತ್ರನಿರ್ವಹಿಸಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನ ನಡೆದ ಸಂದರ್ಭದಲ್ಲಿ ಭಾಗವಹಿಸಿದ 72 ಜನ ಪ್ರತಿನಿಧಿಗಳ ಪೈಕಿ ಕೋಲಾಚಲಂ ವೆಂಕಟರಾವ್ ಕನ್ನಡ ಪ್ರದೇಶಗಳನ್ನು ಪ್ರತಿನಿಧಿಸಿದರು. ಕ್ರಿ.ಶ. 1916 ರಲ್ಲಿ ಹೋಂ ರೂಲ್ ಲೀಗಿನ ಕರ್ನಾಟಕ ಶಾಖೆ ಧಾರವಾಡದಲ್ಲಿ ಗಂಗಾಧರ್ ರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕ್ರಿ.ಶ. 1920 ರ ನಂತರದಲ್ಲಿ ಕರ್ನಾಟಕವು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತದ ಇತರ ಭಾಗಗಳಂತೆ ತೀವ್ರ ತೆರನಾಗಿ ಭಾಗವಹಿಸಿತು. ಮಹಾತ್ಮ ಗಾಂಧೀಜಿಯವರು ಕಾಂಗ್ರೆಸ್ ಅಧಿವೇಶನದ ಪ್ರಯುಕ್ತ ಬೆಳಗಾವಿಗೆ ಆಗಮಿಸಿದ ನಂತರದ ಕಾಲದಿಂದ, ಗಾಂಧೀಜಿಯವರ ಧೋರಣೆಗಳು, ಸಿದ್ಧಾಂತಗಳು, ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಸತ್ಯಾಗ್ರಹ ಚಳುವಳಿಗೆ ತಮ್ಮ ತಾವು ಅರ್ಪಿಸಿಕೊಂಡ ಕನ್ನಡಿಗ ಹೋರಾಟಗಾರರ ಸಂಖ್ಯೆ ಅಪಾರ.[4]

ಕರ್ನಾಟಕದ ಹಲವು ಭಾಗಗಳಲ್ಲಿ ರಾಷ್ಟ್ರೀಯ ಹೋರಾಟದ ಸಂಚಲನ ಪ್ರಾರಂಭವಾಗಿ,

---

[3] ಭಾರತದ ಗಾಜೆಟಿಯರ್(ಭಾರತದ ದೇಶ ಕೋಶ) ಸಂ–4,ಆಡಳಿತ ಮತ್ತು ಸಮಾಜ ಕಲ್ಯಾಣ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಕರ್ನಾಟಕ ಸರಕಾರ ಬೆಂಗಳೂರು,

[4] ಜಯದೇವ ಕುಲಕರ್ಣಿ,ಸ್ವಾತಂತ್ರ್ಯ ಯೋಧನ ನೆನಹುಗಳು(ಆತ್ಮ ಚರಿತ್ರೆ),ವರದರಾಜ ಪ್ರಕಾಶನ ಬೆಂಗಳೂರು,1989

20 ನೇ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೂ ರಾಷ್ಟ್ರೀಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ, ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಹಳೆ ಅದಾಗಲೇ ಮೊಳಗಿತ್ತು.[5] ರಾಷ್ಟ್ರೀಯ ಹೋರಾಟಕ್ಕೆ ದಕ್ಷಿಣ ಕನ್ನಡ ಜಿಲ್ಲೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸಿದೆ. ಇಲ್ಲಿನ ಅನೇಕ ಸ್ವಾತಂತ್ರ್ಯ ಹೋರಾಟಗಾರರು ದೇಶಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಕಾರ್ನಾಡು ಸದಾಶಿವರಾಯರು, ಅರಿಬೈಲು ಭೋಜರಾಯರು, ಯಂ.ಮಾಧವರಾಯರು, ರಾಮಕೃಷ್ಣ ಕಾರಂತರು, ಹಿರಿಯಡ್ಕ ರಾಮರಾಯ ಮಲ್ಯ, ಉಡುಪಿ ಗೋವಿಂದರಾವ್, ವಿ.ಎಸ್ ಕುಡ್ವ, ಬೋಳಾರ ಭೋಜರಾವ್ ಮುಂತಾದವರು ತಮ್ಮ ವೃತ್ತಿಯನ್ನು, ಶಿಕ್ಷಣವನ್ನು, ಕೋರ್ಟು ಕಛೇರಿಯನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಯ ಪ್ರವೃತ್ತರಾದವರಲ್ಲಿ ಅಗ್ರಗಣ್ಯರಾಗಿ ಕಾರ್ನಾಡು ಸದಾಶಿವರಾವ್‌ರವರನ್ನು ಗುರುತಿಸಬಹುದಾಗಿದೆ.[6] ಹುಟ್ಟು ಶ್ರೀಮಂತರಾಗಿದ್ದ ಕಾರ್ನಾಡು ಸದಾಶಿವರಾಯರು ಐಷಾರಾಮಿ ಜೀವನದ ಕಡೆಗೆ ತನ್ನ ದೃಷ್ಟಿಯನ್ನೂ ಹಾಯಿಸದೇ, ಗಾಂಧೀಜಿಯವರ ಕರೆಗೆ ಓಗೊಟ್ಟು ವಕೀಲ ವೃತ್ತಿಯನ್ನು ತ್ಯಜಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ತನ್ನನ್ನೇ ಅರ್ಪಿಸಿದ ಅಪ್ಪಟ ದೇಶಭಕ್ತ ದಕ್ಷಿಣ ಕನ್ನಡದ ಕಾರ್ನಾಡು ಸದಾಶಿವರಾವ್. ಸ್ವಾತಂತ್ರ್ಯ ಹೋರಾಟಗಾರರಾಗಿ, ರಾಜಕೀಯ ಧುರೀಣರಾಗಿ ಸಮಾಜ ಸುಧಾರಕರಾಗಿ, ಕರ್ನಾಟಕದಿಂದ ಮೊದಲ ಪ್ರತಿನಿಧಿಯಾಗಿ ಸತ್ಯಾಗ್ರಹ ಚಳುವಳಿಗೆ ಸಹಿ ಹಾಕಿದರು.[7] "ಕರಾವಳಿಯ ಗಾಂಧೀ" ಎಂದು ಕರೆಯಲ್ಪಡುವ ಕಾರ್ನಾಡು ಸದಾಶಿವರಾಯರ ಕುರಿತು, ಬದುಕಿನ ಹೋರಾಟದ ಕುರಿತು ಯಾವುದೇ ಗ್ರಂಥಗಳು ಆ ಕಾಲಘಟ್ಟದ ಆಧಾರಿತ ಚರಿತ್ರಾ ಬರಹಗಳು ಅಧ್ಯಯನಗಳ ವಿಷಯದಲ್ಲಿ ಉಲ್ಲೇಖಿತವಾಗದೇ ಇರುವುದು ವಿಪರ್ಯಾಸ.

ರಾಷ್ಟ್ರೀಯ ಸ್ವರೂಪದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಖ್ಯವಾಗಿ ಗಾಂಧೀಜಿ, ತಿಲಕ್, ಸುಭಾಷ್‌ಚಂದ್ರ ಬೋಸ್ ಇಂತವರ ಹೋರಾಟದ ವಿಧಾನಗಳನ್ನು ಅಧ್ಯಯನ ಮಾಡಿದ್ದು, ನಮ್ಮ ರಾಷ್ಟ್ರೀಯ ಚಳುವಳಿ ಎಂದರೆ ಕೇವಲ ತಿಲಕ್, ಗಾಂಧೀ ಪರಂಪರೆಯ ನಾಯಕತ್ವದಲ್ಲಿ ನಡೆದ ಕಾಂಗ್ರೆಸ್ ಚಳುವಳಿ ಮಾತ್ರವಲ್ಲ ಪ್ರಾದೇಶಿಕ ಮಟ್ಟದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಕಥನವು ಅಡಕವಾಗಿದ್ದು, ಹಲವರು ಇತಿಹಾಸದ ಪುಟಗಳಲ್ಲಿ ಸೇರದೆ ಕೇವಲ ತೆರೆಮರೆಯಲ್ಲಿ ಮುಚ್ಚಿಹೋಗಿದ್ದಾರೆ. ಇವರುಗಳಲ್ಲಿ

---

[5] Surendra Rao B, Chinnappa Gowda,The Retrieved Acre Nature and culture in the world of the Tuluva,Prasaranga Mangalore University,2003,p.168

[6] ಕಯ್ಯಾರ ಕಿಞ್ಞಣ್ಣ ರೈ, ದುಡಿರವೇ ನನ್ನ ದೇವರು(ಆತ್ಮ ಕಥನ),ಕಿಞ್ಞಣ್ಣ ರೈ ಅಭಿನಂದನ ಸಮಿತಿ ಬೆಂಗಳೂರು,1995,ಪು.12

[7] ನಾರಾಯಣ ಪಿ.ಕೆ,ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ,ಕಾರ್ನಾಡು ಸದಾಶಿವರಾವ್ ಸ್ಮಾರಕ ಟ್ರಸ್ಟ್ ಮಂಗಳೂರು,1983

ಕರ್ನಾಟಕದ ದಕ್ಷಿಣ ಕನ್ನಡದ ಕಾರ್ನಾಡು ಸದಾಶಿವರಾಯರ ಸೇವೆಯೂ ಅಗಣ್ಯವಾದುದು. ಕಲಿಯುಗದ ಕರ್ಣನಂತೆ ದೀನದಲಿತರಿಗೆ ಸಹಾಯಹಸ್ತವಾಗಿ ಸೇವೆಗೈದ ಸದಾಶಿವರಾಯರು ಇತಿಹಾಸದ ಪುಟಗಳಲ್ಲಿ ದಾಖಲಾಗಿ ಉಳಿಯದಂತೆ ಕಣ್ಮರೆಯಾಗಿ ಉಳಿದಿದ್ದಾರೆ. ಇವರ ಕುರಿತ ಸಮಗ್ರವಾದ ಅಧ್ಯಯನ ಇಲ್ಲಿಯವರೆಗೂ ನಡೆದು ಬಂದಿಲ್ಲ. ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳ ಸಲುವಾಗಿ ತನ್ನ ಅಪಾರ ಸಂಪತ್ತನ್ನು ಧಾರೆಯೆರೆದು, ದೇಶಭಕ್ತಿ ಮೆರೆದ ಇವರ ತ್ಯಾಗಜೀವಿ ಹಾಗೂ ಇವರ ಸಮಾಜ ಸೇವೆ ಇನ್ನಿತರ ಸಿದ್ಧಾಂತಗಳನ್ನು ಕತ್ತಲೆಯಿಂದ ಬೆಳಕಿಗೆ ತರಬೇಕು ಎನ್ನುವುದು ನನ್ನ ಅಧ್ಯಯನದ ಉದ್ದೇಶ. ಇವರ ಕುರಿತಾದ ಕೆಲವು ಪುಸ್ತಕಗಳು, ಲೇಖನಗಳು, ಕಿರು ಪುಸ್ತಕಗಳು ಹಾಗೂ ಪತ್ರಾಗಾರ ಇಲಾಖೆಯ ದಾಖಲೆಗಳು ಸ್ವಾತಂತ್ರ್ಯ ಹೋರಾಟಗಾರರ ಕೈಪಿಡಿ ಮತ್ತು ಸಮಕಾಲೀನ ಹೋರಾಟಗಾರರ ದಾಖಲೆಗಳು ಮಾಹಿತಿಗಳನ್ನು ಒದಗಿಸುತ್ತದೆ.

ಭೌಗೋಳಿಕತೆ ಮತ್ತು ಐತಿಹಾಸಿಕತೆ:

ಸಂಶೋಧನಾ ಕಾರ್ಯ ಕೈಗೊಳ್ಳುವ ಸಂದರ್ಭದಲ್ಲಿ ವಿಷಯದ ವಲಯದ ಕುರಿತು ಸಂಪೂರ್ಣವಾಗಿ ಅರಿಯುವುದು ಬಹುಮುಖ್ಯ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯು ಪ್ರಸ್ತುತ ಅಧ್ಯಯನ ಪರಿಧಿಯಾಗಿದ್ದು ಜಿಲ್ಲೆಯ ಇತಿಹಾಸ, ಭೌಗೋಳಿಕತೆ ಅರಿಯುವುದು ಮುಖ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಬ್ರಿಟೀಷರ ಆಳ್ವಿಕೆಯ ಸಂದರ್ಭದಲ್ಲಿ ವಿಭಜನೆಗೊಂಡು, ವಿವಿಧ ರೀತಿಯ ಚಿತ್ರಣವನ್ನು ಮೈಗೂಡಿಸಿಕೊಂಡಿದ್ದರೂ ತನ್ನದೇ ಆದ ಸಂಸ್ಕೃತಿ, ಆಚಾರ ವಿಚಾರಗಳನ್ನು ಹೊಂದಿದ್ದು, ತನ್ನ ಅಸ್ಥಿತ್ವವನ್ನು ಉಳಿಸಿಕೊಂಡಿದೆ. ಇದರೊಂದಿಗೆ ವಿವಿಧ ಗುರುತರವಾದ ಲಕ್ಷಣಗಳಿಂದ, ಅರಣ್ಯಗಳಿಂದ, ಸಮುದ್ರ ಸಾಗರಗಳಿಂದ, ವಿವಿಧ ಧರ್ಮ–ಜಾತಿಗಳ ಸಮ್ಮೇಳನದಿಂದ, ವಿವಿಧ ಉದ್ಯಮಗಳಿಂದ, ವಿವಿಧ ಭಾಷೆಗಳಿಂದ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿನ ಜನರ ಸರಳ ವಿಚಾರಧಾರೆಯಿಂದ ಶೋಭಿತವಾಗಿ ಭಾರತದ ಭೂಪಟದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಕ್ರಿ.ಶ 1860 ರಲ್ಲಿ ಪ್ರತ್ಯೇಕಗೊಳ್ಳುವುದಕ್ಕೆ ಮೊದಲು, ಕರಾವಳಿ ಪ್ರದೇಶವು ಕೆನರಾ ಎಂದು ಕರೆಯಲ್ಪಡುತ್ತಿತ್ತು. ಪೋರ್ಚುಗೀಸರ ಆಗಮನದ ಸಂದರ್ಭದಲ್ಲಿ ಇಲ್ಲಿನ ಜನರ ವ್ಯಾವಹಾರಿಕ ಭಾಷೆ ಕನ್ನಡವನ್ನು ಕನ್ನರಿ ಎಂದೂ, ಪ್ರದೇಶವನ್ನು ಕೆನರಾ ಎಂದು ಕರೆದರು. ಕ್ರಮೇಣ ಈ ಜಿಲ್ಲೆ ವಿಭಾಗಿಸಲ್ಪಟ್ಟ ಸಂದರ್ಭದಲ್ಲಿ, ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾ ಎಂದು ಕರೆಯಲ್ಪಟ್ಟು, ಕ್ರಿ.ಶ 1956 ರ ಕರ್ನಾಟಕದ ಏಕೀಕರಣವಾದಾಗ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂಬ ಜಿಲ್ಲೆಗಳಾಗಿ ಅಧಿಕೃತವಾಗಿ ಘೋಷಿಸಲ್ಪಟ್ಟಿತು.

ದಕ್ಷಿಣ ಕನ್ನಡ ಪ್ರದೇಶ ಪಶ್ಚಿಮಕ್ಕೆ ಅರೇಬಿಯನ್ ಸಮುದ್ರ, ಪೂರ್ವಕ್ಕೆ ಸಹ್ಯಾದ್ರಿಯ ತಪ್ಪಲು, ಭೌಗೋಳಿಕವಾಗಿ ಉಷ್ಣವಲಯವಿದ್ದರೂ ಮಳೆಗಾಲದ ಸಂದರ್ಭದಲ್ಲಿ ಮಳೆಯ ಅಭಾವ ಇಲ್ಲದೇ ಇರುವುದು, ಈ ಜಿಲ್ಲೆಗೆ ಸಹಜವಾದ ನೈಸರ್ಗಿಕವಾದ ಕೊಡುಗೆ, ಬೆಟ್ಟ,ಕಾಡು,ನೀರು, ಪರ್ವತಗಳು, ಜಿಲ್ಲೆಯ ರಮಣೀಯ ದರ್ಶನಕ್ಕೆ ಸಾಕ್ಷಿಯಾಗಿವೆ. ಜಿಲ್ಲೆಯು ಪಶ್ಚಿಮ ಘಟ್ಟಗಳಿಂದ ಪಶ್ಚಿಮದೆಡೆ ಸಮುದ್ರದ ಕಡೆಗೆ ವಿಸ್ತರಿಸಿದೆ. 42 ಕಿ.ಮೀ ಉದ್ದವಾದ ಕರಾವಳಿ ತೀರವಿದ್ದು ಅನೇಕ ಕಡೆ ನದಿಗಳು, ಹೊಳೆಗಳು ಹರಿದಾಡುವುದನ್ನು ಕಾಣಬಹುದು. ಜಿಲ್ಲೆಯು ಉತ್ತರದಲ್ಲಿ ಉಡುಪಿ ಜಿಲ್ಲೆ ಮತ್ತು ಕಾರ್ಕಳ ತಾಲೂಕಿನಿಂದ, ಉತ್ತರ ಮತ್ತು ಪೂರ್ವದ ಕಡೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕು, ಪೂರ್ವದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕು ಮತ್ತು ಪೂರ್ವ ಹಾಗೂ ದಕ್ಷಿಣ ಕಡೆಗಳಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕುಗಳಿಂದ, ದಕ್ಷಿಣದಲ್ಲಿ ಕೇರಳ ರಾಜ್ಯ ಕಣ್ಣೂರು ಜಿಲ್ಲೆಯಿಂದ ಮತ್ತು ಪಶ್ಚಿಮದಲ್ಲಿ ಅರಬೀ ಸಮುದ್ರದಿಂದ ಸುತ್ತುವರಿದಿದೆ.

ಐತಿಹಾಸಿಕವಾಗಿ ತುಳುನಾಡು ಎಂದರೆ ಕೇವಲ ತುಳು ಭಾಷೆಯನ್ನಾಡುವ ಪ್ರದೇಶ ಎಂದು ಅರ್ಥೈಸಲಾಗದು. ಅದೊಂದು ಆಡಳಿತ ಸೂಚಕ ಪದವಾಗಿದ್ದು, ಭಾಷೆಯ ತಳಹದಿಯ ಮೇಲೆ ತುಳುನಾಡಿನ ಗಡಿ ನಿರ್ಧಾರವಾಗಿಲ್ಲ. ದಕ್ಷಿಣ ಕನ್ನಡವನ್ನು ಆಳಿದ ಆಳುಪರ ಮೊದಲ ಇಬ್ಬರು ಅರಸರಾದ ಒಂದನೇ ಆಳುವರಸ ಹಾಗೂ ಒಂದನೇಯ ಚಕ್ರವಾಹನ ತುಳುನಾಡಿನ ಹಿರಿಮೆಯನ್ನು ಎತ್ತಿ ಹಿಡಿದರು. ಆಳುಪರು 700 ವರ್ಷಗಳ ಕಾಲ ಕ್ರಿ.ಶ 663 ರಿಂದ ಕ್ರಿ.ಶ 1333 ರ ವರೆಗೆ ದ.ಕವನ್ನು ಆಳ್ವಿಕೆ ಮಾಡಿದರು. ಪ್ರಾಚೀನ ಗ್ರಂಥವಾದ “ಅಗನಾನೂರುವಿನಲ್ಲಿ” ತುಳುನಾಡು ಕರಾವಳಿಯ ಮಂಗಳೂರಿನ ಬಗ್ಗೆ ವರ್ಣಿಸಿದ್ದು, ಮಂಗಳೂರನ್ನು ‘ಮಂಗಳಾಪುರ’ಎಂದು ಪುರಾತನ ಹೆಸರಿನಿಂದ ಕರೆಯಲಾಗುತ್ತಿತ್ತು, ಎಂದು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಅದೇ ರೀತಿ ಅನೇಕ ರಾಜಮನೆತನಗಳ ಆಳ್ವಿಕೆ ಇಲ್ಲಿ ನಡೆದಿವೆ. ತದ ನಂತರದ ಕಾಲದಲ್ಲಿ ಪಾಶ್ಚಿಮಾತ್ಯ ಆಗಮನ ಮಂಗಳೂರು ವಿಶಾಲವಾದ ಬಂದರುಗಳು ವ್ಯಾಪಾರ ಕೇಂದ್ರವಾಗಿದ್ದು, ಇದನ್ನರಿತ ಪಾಶ್ಚಿಮಾತ್ಯರು ವ್ಯಾಪಾರ ಮಾಡಲೋಸುಗ ಆಗಮಿಸಿದವರು ಕ್ರಮೇಣ ತಮ್ಮ ಚಕ್ರಾಧಿಪತ್ಯವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಿದರು.

ಪಾಶ್ಚಿಮಾತ್ಯರಲ್ಲಿ ಪ್ರಬಲರಾಗಿ ಬೇರೂರಿದ ಬ್ರಿಟಿಷರು ಕ್ರಿ.ಶ 1799 ರಲ್ಲಿ ಇದೇ ಭಾರತವನ್ನು ತನ್ನ ತೆಕ್ಕೆಯಲ್ಲಿ ಆವರಿಸಿದ ಸಂದರ್ಭದಲ್ಲಿ ದಕ್ಷಿಣ ಕನ್ನಡವು ಬ್ರಿಟಿಷರ ಆಳ್ವಿಕೆಯಲ್ಲಿ ಲೀನವಾಯಿತು. ಆಳ್ವಖೇಡ, ತುಳುನಾಡು, ಪರಶುರಾಮನ ಸೃಷ್ಟಿಯನಾಡು ಎಂದು ಕರೆಯಲ್ಪಡುತ್ತಿದ್ದ ದಕ್ಷಿಣ ಕನ್ನಡ ಸ್ವಾತಂತ್ರ್ಯ ಕಳೆದುಕೊಂಡು ಬ್ರಿಟಿಷರ ವಸಾಹತುವಾಗಿ ಪರಿಣಮಿಸಿತು. ಅಂದಿನಿಂದ ಬ್ರಿಟಿಷರ ದಬ್ಬಾಳಿಕೆಯ

ವಿರುದ್ಧವಾದ ಅನೇಕ ಚಳುವಳಿಗಳು, ಹೋರಾಟಗಳು ದಕ್ಷಿಣ ಕನ್ನಡದಲ್ಲಿ ನಡೆಯುತ್ತಲೇ ಬಂದವು. ದಕ್ಷಿಣ ಕನ್ನಡದ ಸುಮಾರು 200 ವರ್ಷಗಳ ಚರಿತ್ರೆಯಲ್ಲಿ 147 ವರ್ಷಗಳು ವಸಾಹತು ಪ್ರಭುತ್ವದ ಹಾಗೂ ವಿರುದ್ಧವಾದ ಹೋರಾಟಗಳ ಚರಿತ್ರೆ ಎನ್ನಬಹುದು.

19ನೇ ಶತಮಾನದ ಆರಂಭದಿಂದ ದೇಶದ ಅನೇಕ ಪ್ರದೇಶಗಳ ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಬ್ರಿಟಿಷರ ಆಡಳಿತ ಶೋಷಣೆ, ಅನ್ಯಾಯ, ದಬ್ಬಾಳಿಕೆ ಮತ್ತು ನಿರಂಕುಶತ್ವದ ವಿರುದ್ಧ ಮಣ್ಣಿನ ಮಕ್ಕಳ ಹೋರಾಟಗಳು ಆರಂಭವಾದವು. ಜವಹರ್‌ಲಾಲ್ ನೆಹರೂ ರವರು ಹೇಳಿರುವ ಹಾಗೆ 'ರಾಷ್ಟ್ರೀಯ ಪ್ರಜ್ಞೆ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳು ಸಾಮ್ರಾಜ್ಯವಾದದ ಒಡಹುಟ್ಟು.' ದಕ್ಷಿಣ ಕನ್ನಡ ಜಿಲ್ಲೆಯ ಹೋರಾಟದ ಹಿನ್ನಲೆಯಲ್ಲಿ 1800–1811 ರ ಒಂದು ಸಂಘರ್ಷ ಮತ್ತು 1830–1831 ರ ಒಂದು ಬಂಡಾಯ ಪ್ರತ್ಯೇಕ ಗಮನಕ್ಕೆ ಪಾತ್ರವಾಗಿವೆ. ಅವುಗಳ ಪೂರ್ಣ ವಿವರಗಳು ಈಗ ದೊರೆಯುವುದಿಲ್ಲವಾದರೂ, ಅವು ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಕ್ಕೆ ಪ್ರತಿರೋಧ ವ್ಯಕ್ತಪಡಿಸಿದ್ದವೆಂದು ಅಂದಿನ ಸರಕಾರಿ ದಾಖಲೆಗಳಿಂದ ಗೊತ್ತಾಗುತ್ತದೆ. ಇದೇ ರೀತಿ ಅನೇಕ ಸ್ಥಳೀಯ ಪ್ರಾದೇಶಿಕ ಮಟ್ಟದ ಚಳುವಳಿಗಳು, ಹೋರಾಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವುದರ ಕುರಿತ ಇತಿಹಾಸವಿದೆ.

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಸಂಶೋಧನಾ ಅಧ್ಯಯನದಲ್ಲಿ ಆಯಾ ವಿಷಯಕ್ಕೆ ಸಂಬಂಧಪಟ್ಟಂತೆ ಆಯಾ ಕಾಲಘಟ್ಟದಲ್ಲಿ ಅಂದರೆ ಪುರಾತನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲದಲ್ಲಿನ ಉಪಯುಕ್ತ ಮಾಹಿತಿಗಳನ್ನು ಆಧರಿಸಿ ಕ್ರಮಬದ್ಧವಾಗಿ ವ್ಯವಸ್ಥಿತವಾಗಿ ಅಧ್ಯಯನವು ನಡೆಯುತ್ತದೆ. ಈ ರೀತಿ ಅಧ್ಯಯನವನ್ನು ಕೈಗೊಂಡಾಗ ಸತ್ಯಾಂಶಗಳು ಬಹಿರಂಗಗೊಳ್ಳುವುದರ ಜೊತೆಗೆ, ತೆರೆಮರೆಯಲ್ಲಿರುವ ವಿಷಯಗಳು ಬೆಳಕಿಗೆ ಬರುತ್ತವೆ. ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಆಡಳಿತಾತ್ಮಕವಾಗಿ ಹಾಗೂ ರಾಜಕೀಯವಾಗಿ ಆಗಿರುವಂತಹ ಬದಲಾವಣೆಗಳನ್ನು ಗುರುತಿಸಿಕೊಳ್ಳಬಹುದು.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯತೆಯ ಪರಿಕಲ್ಪನೆಯ ಬೆಳವಣಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತು ಎನ್ನುವ ಅಂಶದ ಕಡೆಗೆ ಗಮನ ಹರಿಸಲಾಗಿದೆ. ರಾಷ್ಟ್ರೀಯ ರಾಜಕೀಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬಹಳ ಹಿಂದೆ ಉಳಿದಿದೆ ಎನ್ನುವ ಅರ್ಥವನ್ನು ಕಲ್ಪಿಸಲಾಗಿತ್ತು. ಆ ಕಲ್ಪನೆಯನ್ನು ಹೊರದೂಡಿ, ದಕ್ಷಿಣ ಕನ್ನಡ ಜಿಲ್ಲೆಯು ರಾಷ್ಟ್ರೀಯತೆಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿತ್ತು ಎನ್ನುವುದನ್ನು ತಿಳಿಯಡಿಸಲಾಗಿದೆ ಹಾಗೂ ದಕ್ಷಿಣ ಕನ್ನಡದ ವ್ಯಾಪ್ತಿಯಲ್ಲಿ ನಡೆದ

ಸ್ವಾತಂತ್ರ್ಯ ಹೋರಾಟದ ಒಳ-ಹೊರ ನೋಟವನ್ನು ಪರಿಶೀಲಿಸಲಾಗಿದೆ.. ಅಧ್ಯಯನದಲ್ಲಿ ವ್ಯಕ್ತಿ ವಿಷಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದ್ದು, ಕಾರ್ನಾಡು ಸದಾಶಿವರಾಯರ ಜೀವನ, ಶಿಕ್ಷಣ, ಅವರ ಸ್ವಾತಂತ್ರ್ಯ ಹೋರಾಟದ ವಿವಿಧ ದಿಕ್ಕುಗಳು, ರಾಜಕೀಯ ಚಟುವಟಿಕೆಗಳು, ಅವರ ಸಮಾಜಕಲ್ಯಾಣ ಕಾರ್ಯಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ವ್ಯಕ್ತಿ ನಿಷ್ಠವಾದ ಈ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡಿ, ಅಧ್ಯಯನದ ಸಂದರ್ಭದಲ್ಲಿ ವಸ್ತು ನಿಷ್ಠತೆಯನ್ನು ಸೇರಿಸಲಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ನಾಡು ಸದಾಶಿವರಾಯರ ಪಾತ್ರವನ್ನು ಕೇಂದ್ರಬಿಂದುವನ್ನಾಗಿರಿಸಿ ಅಧ್ಯಯನ ನಡೆಸಲಾಗಿದೆ. ಶ್ರೀಮಂತಿಕೆಯಿಂದ ದಾರಿದ್ರ್ಯಕ್ಕೆ ಬಂದ ಕಾರ್ನಾಡುರವರ ಬಲಿದಾನ, ತ್ಯಾಗ ಮನೋಭಾವವು ನಮ್ಮ ದೇಶದ ವರ್ತಮಾನಕ್ಕೆ ಮಾತ್ರವಲ್ಲದೇ ಎಲ್ಲಾ ಕಾಲಕ್ಕೂ ಆದರ್ಶಪ್ರಾಯವಾಗಬೇಕು ಎನ್ನುವುದು ಈ ಅಧ್ಯಯನದ ಮುಖ್ಯ ಉದ್ದೇಶ. ದಕ್ಷಿಣ ಗಾಂಧೀ ಎಂದು ಕರೆಯಿಸಿಕೊಂಡಿರುವ ಕಾರ್ನಾಡು ಸದಾಶಿವರಾಯರ ಸಿದ್ಧಾಂತಗಳು, ಅವರ ಸೇವೆ ಕತ್ತಲಲ್ಲಿ ಮರೆಯಾಗದೇ ಬೆಳಕಿನೆಡೆಗೆ ಬಂದು ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ ಎನ್ನುವ ಉದ್ದೇಶ ಈ ಅಧ್ಯಯನಕ್ಕಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ "ಗಣ್ಯ ವ್ಯಕ್ತಿಗಳ" (ಎಲೈಟ್) ಕಾಣಿಕೆಗಳನ್ನು ಮಾತ್ರ ವೈಭವೀಕರಿಸದೆ, ತೆರೆಮರೆಯಾಗಿ ಹೋಗಿರುವ ಸ್ವಾತಂತ್ರ್ಯ ಹೋರಾಟಗಾರರನ್ನು ಮುಂದಿನ ಸಮಾಜ ಕಡೆಗಣಿಸಬಾರದು ಎನ್ನುವ ಉದ್ದೇಶವನ್ನು ಹೊಂದಿದೆ.

ಅಧ್ಯಯನದ ಇತಿಮಿತಿಗಳಿಗೆ ಸಂಬಂಧಿಸಿದಂತೆ ಕೆಲವೊಂದು ಪರಿಧಿಗಳನ್ನು ಒಳಗೊಂಡಿವೆ. ಈ ಅಧ್ಯಯನಕ್ಕೆ ಕೆಲವು ಹೊಸ ವಿಚಾರ, ಒಳ ನೋಟಗಳನ್ನು ಸೇರಿಸುವುದರ ಮೂಲಕ ಅಧ್ಯಯನದ ವಿಷಯದ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಪ್ರಯತ್ನಿಸಲಾಗಿದೆ. ಸದಾಶಿವರಾಯರ ಜೀವಿತಾವಧಿಯಲ್ಲಿ ಅವರು ಸಂಘಟಿಸಿದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟಗಳು ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ಅದರಲ್ಲೂ ದಕ್ಷಿಣ ಕನ್ನಡದಲ್ಲಿ ಇವರು ಕೈಗೊಂಡ ಚಳುವಳಿ, ರಚಿಸಿದ ಜಿಲ್ಲಾ ಕಾಂಗ್ರೆಸ್ ಸಮಿತಿ, ಸೇವಾ ಕ್ಷಮತೆ ಹಾಗೂ ತಮ್ಮ ಜೀವಿತಾವಧಿಯಲ್ಲಿ ಅನುಭವಿಸಿದ ಕಷ್ಟ ಕಾರ್ಪಣ್ಯಗಳನ್ನು ತಿಳಿಸಲಾಗಿದೆ. ಪ್ರಸ್ತುತ ಅಧ್ಯಯನವು ರಾಜಕಾರಣ, ಸಮಾಜ, ಸಾಮಾಜಿಕ ಸುಧಾರಣಾ ನೀತಿ ಮೊದಲಾದ ಸಂಕೀರ್ಣ ಸಂಬಂಧಗಳ ಹಿನ್ನಲೆಯಲ್ಲಿ ಹಾಗೂ ವ್ಯಾಪ್ತಿಯಲ್ಲಿ ಈ ಅಧ್ಯಯನದ ಉದ್ದೇಶಗಳನ್ನು ತಿಳಿಸಲಾಗಿದೆ.

ಕ್ಷೇತ್ರ ಕಾರ್ಯ:

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಮಾಹಿತಿ ಸಂಗ್ರಹಕ್ಕೆ ಕ್ಷೇತ್ರ ಕಾರ್ಯ ವಿಧಾನವನ್ನು ಆಳವಡಿಸಿಕೊಳ್ಳಲಾಗಿದೆ. ಕಾರ್ನಾಡು ಸದಾಶಿವರಾಯರಿಗೆ ಸಂಬಂಧಿಸಿದ ದಾಖಲೆಗಳು ರಾಜ್ಯ ಹಾಗೂ

ಮದ್ರಾಸ್ ಪತ್ರಾಗಾರದಲ್ಲಿ ದೊರೆತ ಮಾಹಿತಿಗಳನ್ನು, ಜಿಲ್ಲಾಧಿಕಾರಿ ಕಛೇರಿಯ ದಾಖಲೆಗಳು, ಪತ್ರಿಕೆಗಳನ್ನು ಉಪಯೋಗಿಸಲಾಗಿದೆ. ದೊರೆತ ಮಾಹಿತಿಗಳನ್ನು ಕೂಲಂಕುಷವಾಗಿ ಪರಾಮರ್ಶಿಸಿ ಇಲ್ಲಿ ಬಳಸಲಾಗಿದೆ. ದೊರೆತ ಮಾಹಿತಿಗಳ ಯಥಾರ್ಥತೆಯನ್ನು ಮತ್ತು ಸಪ್ರಮಾಣವನ್ನು ಎಷ್ಟು ಸಾಧ್ಯವೋ ಅಷ್ಟು ಪರೀಕ್ಷಿಸಿ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

ಆಧಾರಗಳು:

ವೈಭವದ ತಾಣವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದ ಸಂಯೋಜಿತ ಸಂಶೋಧನಾ ಅಧ್ಯಯನ ಪ್ರಾರಂಭವಾಗಿರುವುದು 20ನೇ ಶತಮಾನದ ಪೂರ್ವಾರ್ಧದಲ್ಲಿ ತುಳುನಾಡಿನ ಕುರಿತು ಅಧ್ಯಯನ, ಇತಿಹಾಸ ಶೋಧನೆ, ಸಂಶೋಧನೆಗಳಿಗೆ ತಳಪಾಯ ಹಾಕಿದವರಲ್ಲಿ ಪೊಳಲಿ ಶೀನಪ್ಪಹೆಗಡೆ, ಮಂಜೇಶ್ವರ ಗಣಪತಿರಾವ್ ಐಗಳು, ಮಂಜೇಶ್ವರ ಗೋವಿಂದ ಪೈ, ಬಿ.ಎ.ಸಾಲೆತ್ತೂರು ಮತ್ತು ಕಾರ್ಕಳ ಕೇಶವಕೃಷ್ಣ ಕುಡ್ವ ಇವರುಗಳು ಅಗ್ರಗಣ್ಯರಾಗಿದ್ದಾರೆ.[8] ಅದಲ್ಲದೇ, ವಿದೇಶಿ ಆಕರಗಳು ಕೂಡ ಜಿಲ್ಲೆಯ ಇತಿಹಾಸವನ್ನು ಅರಿಯಲು ಸಹಕಾರಿಯಾಗಿದ್ದು, ಪ್ರವಾಸಿಗರ ವರದಿಗಳು, ದಾಖಲೆಗಳು ಮತ್ತು ಸಮಕಾಲೀನ ಇತಿಹಾಸ ಗ್ರಂಥಗಳು ಲಭ್ಯವಾಗಿವೆ.[9]

ಮದ್ರಾಸ್ ಪ್ರೆಸಿಡೆನ್ಸಿಯು ಹಲವು ಜಿಲ್ಲಾ ಮಾನ್ಯುವಲ್‌ಗಳನ್ನು ಪ್ರಕಟಿಸಿದ್ದು, ಅವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಎರಡು ಸಂಮುಟಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಜೆ ಸ್ಟಾರಾಕ್ ಮತ್ತು ಹೆರಾಲ್ಡ್ ಎ.ಸ್ಟುವರ್ಟ್ ಸಂಪಾದಕತ್ವದಲ್ಲಿ ಎರಡು ಸಂಪುಟಗಳು ಕ್ರಿ.ಶ 1894–1895 ರ ಅವಧಿಯಲ್ಲಿ ಬಿಡುಗಡೆಯಾಗಿದ್ದು, ಇವುಗಳು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದ ಮಾಹಿತಿಗಳನ್ನು ನೀಡುತ್ತವೆ.

ಫ್ರಾನ್ಸಿಸ್ ಬುಕಾನನ್ ರಚಿತ ಕ್ರಿ.ಶ 1807 ರಲ್ಲಿ ಪ್ರಕಟವಾದ "journey from Madras, through the Countries of mysore, canara and Malbar" ಎನ್ನುವ ಪ್ರವಾಸಿ ಕಥನವು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

"ಸೌತ್ ಕೆನರಾ ಗೆಜೆಟಿಯರ್" ಎನ್ನುವ ಸಂಪಾದಕೀಯ ಗ್ರಂಥವು ಕರ್ನಾಟಕ ರಾಜ್ಯ ಸರ್ಕಾರದ ಸಹಕಾರದಿಂದ ಪ್ರಕಟಿತವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಸಮಗ್ರವಾದ ಮಾಹಿತಿಗಳನ್ನು ನೀಡುತ್ತದೆ.

---

[8] ಪುಂಡಿಕಾ ಗಣಪಯ್ಯ ಭಟ್,ಇತಿಹಾಸ ರಚನೆಯ ಮೊದಲ ಹೆಜ್ಜೆಗಳು(ಲೇ),ಮುಕುಂದ ಪ್ರಭು,ಪೊಲಿ–200,ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು,2000,ಪು.01

[9] ವಸಂತ ಮಾಧವ ಕೆ.ಜಿ,ಜಿಲ್ಲೆಯ ಇತಿಹಾಸಕ್ಕೆ ವಿದೇಶಿ ಆಕರಗಳು(ಲೇ), ಮುಕುಂದ ಪ್ರಭು,ಪೊಲಿ–200,ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು,2000,ಪು.46

ಪೊಲಿ 200, ಶ್ರೀ ಮುಕುಂದ ಪ್ರಭು ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, 2000, ಈ ಸಂಪುಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದ ಚಿತ್ರಣವನ್ನು ಕಾಣಬಹುದು. ಈ ಗ್ರಂಥಕ್ಕೆ ಬಿ.ವಿ ಕಕ್ಕಿಲಾಯ ರವರು ಬರೆದಿರುವ "ಚಳುವಳಿಯ ನೆನಪುಗಳು" ಲೇಖನವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವಂತಹ ಚಳುವಳಿಗಳ ನೆನಪುಗಳನ್ನು ತರಿಸುತ್ತದೆ. ಕ್ರಿ.ಶ 1800 ರ ನಂತರದಲ್ಲಿ ದಕ್ಷಿಣ ಕನ್ನಡದಲ್ಲಿ ನಡೆದಂತಹ ದಂಗೆಗಳು, ಚಳುವಳಿಗಳ ಮಾಹಿತಿಗಳನ್ನು ನೀಡುತ್ತವೆ. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ದಕ್ಷಿಣ ಕನ್ನಡದ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕಾರ್ನಾಡು ಸದಾಶಿವರಾಯರು ಭಾರತ ಸ್ವಾತಂತ್ರ್ಯಕ್ಕೆ ನೀಡಿದಂತಹ ಕೊಡುಗೆಗಳ ಸಂಕ್ಷಿಪ್ತವಾದ ಮಾಹಿತಿ ಲಭ್ಯವಿದೆ. ಅದೇ ರೀತಿ ಬಾಲಕೃಷ್ಣ ಶೆಟ್ಟಿ ಪೊಳಲಿಯವರ "ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು" ಲೇಖನದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಸಾಮಾಜಿಕ ಸುಧಾರಣೆಗಳು ಚಳುವಳಿಗೆ ನೀಡಿದ ಕೊಡುಗೆಗಳನ್ನು ವಿವರಿಸುತ್ತದೆ. ಕಾರ್ನಾಡು ಸದಾಶಿವರಾಯರು ಸಮಾಜಕ್ಕೆ ನೀಡಿದ ಕೊಡುಗೆಗಳ ಕುರಿತು ಚರ್ಚಿಸಲಾಗಿದ್ದು, ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಯನ್ನು ಒದಗಿಸುತ್ತದೆ.

"ಅಪೊಸ್ಟಲ್ ಆಫ್ ಸಾಕ್ರಿಫೈಸ್" ಕಾರ್ನಾಡು ಸದಾಶಿವರಾಯರ ಸ್ಮಾರಕ ಗ್ರಂಥ. ಕಾರ್ನಾಡು ಸದಾಶಿವರಾಯರ ಜೀವನ ಹೋರಾಟ ಬಲಿದಾನಗಳ ಕಥನವು ಈ ಗ್ರಂಥದಲ್ಲಿದೆ. ಕಾರ್ನಾಡು ಸದಾಶಿವರಾಯರು ಜೀವನದಲ್ಲಿ ನಡೆದು ಬಂದ ಹಾದಿ, ಸ್ವಾತಂತ್ರ್ಯ ಹೋರಾಟದ ವಿಭಿನ್ನತೆಯನ್ನು ವಿವರಿಸಲಾಗಿದೆ. ಅಲ್ಲದೇ ಸದಾಶಿವರಾಯರು ಹಾಗೂ ಮಹಾತ್ಮ ಗಾಂಧೀಜಿಯವರ ಪತ್ರ ವ್ಯವಹಾರಗಳು, ಜವಹರ ಲಾಲ್ ನೆಹರೂರವರು ಬರೆದಿರುವಂತಹ ಪತ್ರಗಳ ಕುರಿತು ದಾಖಲಿಸಲಾಗಿದೆ. ಗಾಂಧೀಜಿ ಹಾಗೂ ಸದಾಶಿವರಾಯರ ಪತ್ರಗಳ ಮೂಲಕ ಅವರ ನಡುವಿನ ಉತ್ತಮ ಭಾಂದವ್ಯವನ್ನು ಅರ್ಥೈಸಬಹುದಾಗಿದೆ.

ಸೂರ್ಯನಾಥ್ ಕಾಮತ್‌ರ "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಎಂಬ ಗ್ರಂಥದ ಮೂರೂ ಸಂಪುಟಗಳು ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಕನ್ನಡಿ ಎನ್ನಬಹುದು. ಈ ಗ್ರಂಥವು ಕರ್ನಾಟಕದ ಜಿಲ್ಲಾವಾರು ಹೋರಾಟದ ವರದಿಯನ್ನು ಒದಗಿಸಿದೆ. ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಜೀವನ ಮತ್ತು ಹೋರಾಟದ ವಿವರಣೆ ಈ ಗ್ರಂಥದಲ್ಲಿದೆ. ಭಾರತ ಸ್ವಾತಂತ್ರ್ಯ ಹೋರಾಟದ ಅಂದಿನ ಪರಿಸ್ಥಿತಿಯಲ್ಲಿ ಹೋರಾಟದ ಭಾವನೆ ಯಾವ ರೀತಿ ಹರಡಿತು ಎಂಬುದನ್ನು ಲೇಖಕರು ಇಲ್ಲಿ ತಿಳಿಯಪಡಿಸುತ್ತಾರೆ. ರಾಷ್ಟ್ರೀಯತೆಯ ಕಲ್ಪನೆಗೆ ಜನಸಾಮಾನ್ಯರ ಪ್ರತಿಕ್ರಿಯೆಯ ಸ್ವರೂಪ ಈ ಗ್ರಂಥದಲ್ಲಿ ಅಡಕವಾಗಿದೆ. ಸ್ವಾತಂತ್ರ್ಯ ಹೋರಾಟದ ಸಂವಹನವಾಗಿ ಕಾರ್ಯನಿರ್ವಹಿಸಿದ ಪತ್ರಿಕಾ ಸಮೂಹದ ವಿವಿಧ

ಸಂಘಟನೆಗಳ ಚಟುವಟಿಕೆಗಳನ್ನು ಇಲ್ಲಿ ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವ ಕುರಿತು ಸಮಗ್ರವಾದ ಮಾಹಿತಿಗಳನ್ನು ನೀಡಿಲ್ಲವಾದರೂ ಸಂವಹನ ಕಾರ್ಯಕ್ರಮಗಳ ವಿವರಣೆಯು ಲಭ್ಯವಾಗಿದೆ. ಕರ್ನಾಟಕದ ಹಲವು ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರ ಕುರಿತ ಲೇಖನಗಳು ಪ್ರಕಟವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ವೀರಗಾಥೆಯು ಈ ಸಂಪುಟದಲ್ಲಿ ಅಡಕವಾಗಿವೆ. ಕಾರ್ನಾಡು ಸದಾಶಿವರಾಯರ ಕುರಿತ ಲೇಖನವು ಪ್ರಸ್ತುತ ಅಧ್ಯಯನಕ್ಕೆ ಹೆಚ್ಚು ಉಪಯುಕ್ತ. ಸದಾಶಿವರಾಯರ ಮಕ್ಕಳಾದ ಶ್ರೀಮತಿ. ಸುಗುಣಾ ಕಾರ್ನಾಡು ದೇಸಾಯಿ ಹಾಗೂ ಶ್ರೀಮತಿ. ರಾಧಾ ಇವರು ತಮ್ಮ ತಂದೆಯವರ ಕುರಿತು ಬರೆದಿರುವಂತಹ ಲೇಖನಗಳು ಹೆಚ್ಚು ಸೂಕ್ತವಾಗಿದೆ.

ಯಶೋಧರ್ ಪಿ. ಕರ್ಕೇರ ರವರ "ತ್ಯಾಗಜೀವಿ ಕಾರ್ನಾಡು ಸದಾಶಿವರಾವ್" ಎಂಬ ಕೃತಿ ಕಾರ್ನಾಡು ಸದಾಶಿವರಾಯರ ಜೀವನದ ಕುರಿತ ಮಾಹಿತಿಯನ್ನು ಒದಗಿಸುತ್ತದೆ. ಅವರು ಕೈಗೊಂಡಂತಹ ಸುಧಾರಣಾ ಕಾರ್ಯಗಳು, ಸ್ವಾತಂತ್ರ್ಯ ಹೋರಾಟದಲ್ಲಿನ ಭಾಗವಹಿಸುವಿಕೆ, ಅವರ ತ್ಯಾಗಮಯ ಜೀವನದ ಮಾಹಿತಿಯನ್ನು ಲೇಖಕರು ಕಲೆ ಹಾಕಿರುತ್ತಾರೆ.

1972 ರಲ್ಲಿ ಪ್ರಕಟಿತವಾದ "ದೇಶಭಕ್ತ ಕಾರ್ನಾಡು ಸದಾಶಿವರಾಯರು" ಕೃತಿಯು ಡಾ॥ ಶಿವರಾಮ ಕಾರಂತರ ರಚನೆಗೆ ಒಳಪಟ್ಟಿರುವಂತದ್ದು. ಕಾರ್ನಾಡು ಸದಾಶಿವರಾಯರನ್ನು ನೇರವಾಗಿ ಕಂಡಂತಹ ಶಿವರಾಮ ಕಾರಂತರು ಅವರ ಜೀವನದ ಸಾರಾಂಶವನ್ನು ಈ ಕೃತಿಯಲ್ಲಿ ನೀಡಿರುತ್ತಾರೆ. ಸದಾಶಿವರಾಯರ ಜೀವನ ಚರಿತ್ರೆಯ ಕುರಿತಾದ ಈ ಕೃತಿಯು ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಯನ್ನು ಒದಗಿಸಿದೆ.

ಕಾರ್ನಾಡು ಸದಾಶಿವರಾಯರ ಶತಮಾನೋತ್ಸವದ ಅಂಗವಾಗಿ ಪ್ರಕಟಗೊಂಡಿರುವ "ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ" ಪಿ.ಕೆ. ನಾರಾಯಣರವರ ಕೃತಿಯಾಗಿದೆ. ಈ ಸಂಚಿಕೆಯು ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಕುರಿತ ಮಾಹಿತಿಯನ್ನು ಒದಗಿಸುತ್ತದೆ. ಅಲ್ಲದೆ ಜಿಲ್ಲೆಗೆ ಗಾಂಧೀಜಿಯವರು ಭೇಟಿ ಕೊಟ್ಟಿರುವ ಸನ್ನಿವೇಶದ ಬಗ್ಗೆ ತಿಳಿಸುತ್ತದೆ. ಕಾರ್ನಾಡು ಸದಾಶಿವರಾಯರ ಕುರಿತು ಉಪಯುಕ್ತ ಮಾಹಿತಿಯು ಲಭ್ಯವಾಗಿದೆ. ಜಿಲ್ಲೆಯ ಇತರ ಸತ್ಯಾಗ್ರಹಿಗಳ ಪರಿಚಯ ಈ ಸ್ಮರಣ ಸಂಚಿಕೆಯಲ್ಲಿ ತಿಳಿಯಪಡಿಸಲಾಗಿದೆ.

ರಾಜ್ಯ ಪತ್ರಗಾರ ಇಲಾಖೆಯಲ್ಲಿ ಲಭ್ಯವಾಗಿರುವ ಪ್ರಾಥಮಿಕ ಆಧಾರಗಳು ಈ ಸಂಶೋಧನಾ ಅಧ್ಯಯನಕ್ಕೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿದೆ. ಕಾರ್ನಾಡು ಸದಾಶಿವರಾಯರ ಮಗಳಾದ ದಿ। ಸುಗುಣಾ ದೇಸಾಯಿ ಕಾರ್ನಾಡು ರವರು ತಮ್ಮ ತಂದೆಯ ಜೀವನದ ಕುರಿತು ದಾಖಲಿಸಿರುವ ಪತ್ರಗಳು, ಕಯ್ಯಾರ ಕಿಞ್ಞಣ್ಣ ರೈ ಯವರ ಲೇಖನಗಳು ಕಾರ್ನಾಡು ಸದಾಶಿವರಾಯರ ಕುರಿತು ಮಹತ್ತರವಾದ ದಾಖಲೆಗಳನ್ನು ಒದಗಿಸಿವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದ ಸಮಕಾಲೀನ ನಿಯತ ಕಾಲಿಕೆಗಳು ಪ್ರಸ್ತುತ ಅಧ್ಯಯನದ ಪ್ರಾಥವಿಕ ಆಕರವಾಗಿದ್ದು, ಸ್ವಾತಂತ್ರ್ಯ ಚಳುವಳಿಯ ಘಟನಾವಳಿಯ ಕುರಿತು ಸವಿಸ್ತಾರವಾದ ಮಾಹಿತಿಗಳನ್ನು ನೀಡಿವೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ "ಸ್ವಾತಂತ್ರ್ಯ ಹೋರಾಟ ಹಾಗೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಗಡೂರು ರಾಮಚಂದ್ರರಾಯರ ಪಾತ್ರ–ಒಂದು ಅಧ್ಯಯನ"ಎಂಬ ಮಹಾ ಪ್ರಬಂಧವು ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಹಲವು ಮಜಲುಗಳನ್ನು ಸಂಶೋಧಕರು ವಿವರಿಸುತ್ತಾರೆ. ಈ ಪ್ರಬಂಧವು ವ್ಯಕ್ತಿ ನಿಷ್ಠವಾದ ಅಧ್ಯಯನವನ್ನು ಒಳಗೊಂಡಿದ್ದು ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಯನ್ನು ಒದಗಿಸಿದೆ.

ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ "ಕರ್ನಾಟಕದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು ಒಂದು ಅಧ್ಯಯನ: 1919–1947" ಎಂಬ ಪ್ರಬಂಧದಲ್ಲಿ ಗಾಂಧೀಜಿಯವರು 1919–1947 ರ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆಸಿದ ರಚನಾತ್ಮಕ ಕಾರ್ಯಕ್ರಮಗಳ ಕುರಿತು ಅವಲೋಕಿಸಿದ್ದು, ಸ್ವದೇಶಿ ಚಳುವಳಿ, ಖಾದಿ ಮತ್ತು ಗ್ರಾಮೋದ್ಯೋಗ ಪ್ರಚಾರ, ಅಸ್ಪೃಶ್ಯತಾ ವಿರೋಧಿ ಅಂದೋಲನ, ಪಾನ ವಿರೋಧ ನೀತಿ, ರಾಷ್ಟ್ರೀಯ ಶಿಕ್ಷಣ, ಗ್ರಾಮ ಸ್ವರಾಜ್ಯ, ಹಿಂದೂ ಮುಸ್ಲಿಂ ಐಕ್ಯತೆ ಮತ್ತು ಮಹಿಳೆಯರ ಅಭಿವೃದ್ಧಿ ಮಂತಾದ ರಚನಾತ್ಮಕ ಕಾರ್ಯಕ್ರಮಗಳು ಕರ್ನಾಟಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದವು. ಗಾಂಧೀಜಿಯವರು ದೇಶ ಸೇವೆಯ ನಿಟ್ಟಿನಲ್ಲಿ ನಡೆಸಿದ ಈ ರಚನಾತ್ಮಕ ಕಾರ್ಯಕ್ರಮಗಳ ಸ್ಪಷ್ಟತೆಯನ್ನು ಸಂಶೋಧಕರು ಈ ಪ್ರಬಂಧದಲ್ಲಿ ವಿಶ್ಲೇಷಿಸಿರುತ್ತಾರೆ. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ರಚನಾತ್ಮಕ ಕಾರ್ಯಕ್ರಮಗಳ ಕುರಿತು ವಿವರಿಸುವಾಗ ಕಾರ್ನಾಡು ಸದಾಶಿವರಾಯರು ನಡೆಸಿದ ದಲಿತಾ ಸೇವಾ ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತವಾಗಿ ವಿವರಣೆ ನೀಡಲಾಗಿದೆ.

"ಹಾಸನ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಒಂದು ಅಧ್ಯಯನ" ಎಂಬ ಸಂಶೋದನಾ ಪ್ರಬಂಧವು ಹಾಸನ ಜಿಲ್ಲೆಯ ರಾಷ್ಟ್ರಾಭಿಮಾನಿಗಳ ಕುರಿತಾದ ಹೋರಾಟಗಳ ಕುರಿತು ವಿಶ್ಲೇಷಿಸಲಾಗಿದೆ. ಹಾಸನದಲ್ಲಿ 1887ರಿಂದ 1947 ರವರೆಗಿನ ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರಣ ಈ

ಅಧ್ಯಯನದಲ್ಲಿದ್ದು, ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಎ.ಜಿ.ರಾಮಚಂದ್ರ ರಾವ್, ಜಿ.ಎನ್ ಮೇಲ್ಕೋಟೆ, ಎನ್.ಜಿ ಅತ್ರಿ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಬಿ.ಎಂ ಮಂಜಪ್ಪ ಗೌಡ, ಹೆಚ್.ಟಿ ಕಾರ್ಲೆ, ವಿಮಲಾ ಭಾಯಿ ಮೇಲ್ಕೋಟೆ, ಎಂ.ಸಿ ಗುಂಡೂರಾವ್, ಕೆ.ಎ ಕೃಷ್ಣ ಸ್ವಾಮಿ ಮಂತಾದವರ ತ್ಯಾಗಮಯ ಹೋರಾಟದ ಕುರಿತು ವಿವರಿಸಲಾಗಿದೆ. ಕಾರ್ನಾಡು ಸದಾಶಿವರಾಯರ ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಿರುವ ಸಂಶೋಧಕರು, ಉಪ್ಪಿನ ಸತ್ಯಾಗ್ರಹದಲ್ಲಿ ಅವರ ಭಾಗವಹಿಸುವಿಕೆಯ ಕುರಿತು ಪ್ರಸ್ತಾಪಿಸಲಾಗಿದೆ.

"ದಲಿತ ಚಳುವಳಿ, ದಲಿತರ ಅನನ್ಯತೆ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟ 1885–1847, 2009 ರಲ್ಲಿ ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಾಬಂಧವು ನನ್ನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಭಾರತೀಯ ಸ್ವತಂತ್ರತೆಯ ಹೋರಾಟದ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತದೆ. ಇಲ್ಲಿ ದಲಿತರ ಚಳುವಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಚಳುವಳಿಯ ಬಗ್ಗೆ ವ್ಯತಿರಿಕ್ತವಾದ ಮಾಹಿತಿ ಲಭ್ಯವಾಗಿಲ್ಲ. ದಕ್ಷಿಣ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಮಾಜದ ಕೆಳವರ್ಗದ ಜನರ ಹೋರಾಟಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ.

"ಡಾ। ಹೆಚ್.ಎಸ್ ದೊರೆಸ್ವಾಮಿಯವರ ಜೀವನ ಮತ್ತು ಸಾಧನೆಗಳು" ಎಂಬ ಪ್ರಬಂಧವು ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿಯವರ ಜೀವನ ಚರಿತ್ರೆಯ ಕುರಿತ ಸಂಶೋಧನಾ ಅಧ್ಯಯನವಾಗಿದೆ. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾನಂತರದಲ್ಲಿ ದೊರೆಸ್ವಾಮಿಯವರು ಭಾರತಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಲಾಗಿದ್ದು, ಅವರ ಜೀವನ, ಸಾಧನೆ, ರಚನಾತ್ಮಕ ಕಾರ್ಯಕ್ರಮಗಳು, ಸ್ವಾತಂತ್ರ್ಯ ಹೋರಾಟಗಾರನಾಗಿ ಸಲ್ಲಿಸಿರುವ ಕೊಡುಗೆಗಳ ಕುರಿತು ಸವಿಸ್ತಾರವಾಗಿ ಚರ್ಚಿಸಲಾಗಿದೆ.

ವಿಮರ್ಶೆಗೆ ಒಳಪಡಿಸಿದಂತಹ ಈ ಎಲ್ಲಾ ಗ್ರಂಥಗಳು ನನ್ನ ಅಧ್ಯಯನದ ವಿಷಯಕ್ಕೆ ಮೂಲಭೂತ ಮಾಹಿತಿಗಳನ್ನು ನೀಡುತ್ತವೆ. ಭಾರತದ ಸ್ವಾತಂತ್ರ್ಯ ಹೋರಾಟದ ಬಗೆಗಿನ ವಿಶ್ಲೇಷಣಾತ್ಮಕ ಕ್ರಮಗಳನ್ನು ಈ ಗ್ರಂಥಗಳ ಅಧ್ಯಯನದಿಂದ ಅಳವಡಿಸಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಸಂಗ್ರಹಿಸಿದ ಎಲ್ಲಾ ಪ್ರಾಥಮಿಕ ಆಕರಗಳು, ಗೆಜೆಟಿಯರ್‌ಗಳು, ಮ್ಯಾನ್ಯುವಲ್‌ಗಳು, ಆಡಳಿತಾತ್ಮಕ ವರದಿಗಳು, ಗ್ರಂಥಗಳು ಹಾಗೂ ಇತರ ಮಾಹಿತಿಗಳ ಆಧಾರಕ್ಕೆ ಅನುಗುಣವಾಗಿ ಒಟ್ಟು ಐದು ಅಧ್ಯಾಯಗಳನ್ನಾಗಿ ವಿಂಗಡಿಸಲಾಗಿದೆ. ಭಾರತೀಯ ಸ್ವಾತಂತ್ರ್ಯ ಹೋರಾಟದ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆಯನ್ನು ಗಣನೆಗೆ ತೆಗೆದುಕೊಂಡು, ಅದರಲ್ಲಿ ಕಾರ್ನಾಡು ಸದಾಶಿವರಾಯರ ಪಾತ್ರವನ್ನು ಪ್ರಧಾನವಾಗಿ ಕೇಂದ್ರೀಕರಿಸಲಾಗಿದೆ.

ಇತಿಹಾಸ ಸಂಶೋಧನ ವಿಧಾನ:

ಯಾವುದೇ ಅಧ್ಯಯನ ಪದ್ಧತಿಯಲ್ಲಿ ನಿರ್ದಿಷ್ಟವಾದ ಕ್ರಮಗಳು ಇರುತ್ತವೆ. ಒಂದು ವಿಷಯದ ಅಥವಾ ವಸ್ತುವಿನ ಬಗೆಗಿನ ಅಧ್ಯಯನ ಎಂದಾಗ ಸೂಕ್ತ ಮಾರ್ಗಗಳನ್ನು ಅಳವಡಿಸುವುದು ಮುಖ್ಯ ಅದೇ ರೀತಿ ಈ ಅಧ್ಯಯನದಲ್ಲಿ ಸಂಶೋಧನ ಮಾರ್ಗದ ವಿಧಾನಗಳನ್ನು ಅಳವಡಿಸಲಾಗಿದೆ. ಆಯ್ಕೆಗೊಂಡ ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳ ಸಂಗ್ರಹಣೆ, ಮಾಹಿತಿಗಳ ಪಟ್ಟಿ, ಅಥವಾ ವರ್ಗೀಕರಣ, ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣಾ ಕ್ರಮಗಳು, ಸಂಯೋಜನಾ ವಿಧಾನ, ಜೋಡಣಾ ಕ್ರಮ ಮತ್ತು ನಿರೂಪಣಾ ವಿಧಾನಗಳ ತತ್ವಗಳನ್ನು ಅಳವಡಿಸಲಾಗಿದೆ.

ವಿಷಯಾನುಕ್ರಮಣಿಕೆ

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಒದಗಿರುವ ಎಲ್ಲಾ ಆಧಾರಗಳ ಮಾಹಿತಿಗಳಿಗನುಸಾರವಾಗಿ ಒಟ್ಟು ಐದು ಅಧ್ಯಾಯಗಳನ್ನಾಗಿ ವರ್ಗೀಕರಿಸಲಾಗಿದ್ದು, ಈ ಅಧ್ಯಯನವು ಕಾರ್ನಾಡು ಸದಾಶಿವರಾಯರ ಜೀವಿತಾವಧಿಯವರೆಗಿನ ಸಾಮಾಜಿಕ ಹಾಗೂ ರಾಷ್ಟ್ರೀಯ ಹೋರಾಟಗಳ ಕಾಲ ಘಟ್ಟಕ್ಕೆ ಸೀಮಿತಗೊಳಿಸಲಾಗಿದೆ. 1881 ರಿಂದ 1937 ರ ಅವಧಿಯನ್ನು ಪರಿಗಣಿಸಲಾಗಿದೆ.

ಅಧ್ಯಾಯ ಒಂದು: ಪೀಠಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಕಹಳೆ ಎಲ್ಲೆಡೆ ಮೊಳಗಿಸಿದವರಲ್ಲಿ ಶ್ರಮಿಸಿದವರಲ್ಲಿ ಕಾರ್ನಾಡು ಸದಾಶಿವರಾವ್ ಪ್ರಮುಖರಾಗಿರುತ್ತಾರೆ. ಜಿಲ್ಲೆಯ ಪ್ರತಿಯೊಬ್ಬನಲ್ಲೂ ದೇಶಭಕ್ತಿ ಮೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಿದರು. ಸದಾಶಿವರಾವ್ ಕರ್ನಾಟಕ ಕಂಡ ಅಪ್ಪಟ ದೇಶಭಕ್ತ. ದಕ್ಷಿಣ ಕನ್ನಡ ಜಿಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ತ್ಯಾಗ ಬಲಿದಾನಕ್ಕೆ ಸಾಕ್ಷಿಯಾಗಿರುವ ಅಪ್ಪಟ ದೇಶಭಕ್ತನ ರಾಜಕೀಯ ಪ್ರವೇಶದ ಕುರಿತು ಹೇಳಲಾಗಿದೆ. ಒಂದನೇ ಅಧ್ಯಾಯವು ಇಡೀ ಸಂಶೋಧನಾ ಅಧ್ಯಯನದ ಅಂಶಗಳನ್ನು ಒಳಗೊಂಡಿದೆ. ಈ ಅಧ್ಯಾಯವು ಒಳಗೊಂಡಿರುವ ವಿಷಯಗಳನ್ನು ಸ್ಥೂಲವಾಗಿ ವಿಭಾಗಿಸಲಾಗಿದೆ. ಸಂಶೋಧನೆಯ ಉದ್ದೇಶ, ವಿಧಾನ, ವ್ಯಾಪ್ತಿ, ಮಹತ್ವ, ಕ್ಷೇತ್ರ ಕಾರ್ಯ, ಅಧ್ಯಯನದ ವರ್ಗೀಕರಣ ಮುಂತಾದವುಗಳನ್ನು ಒಳಗೊಂಡಿದೆ. ಸಂಶೋಧನಾ ವಿಷಯದ ಮಹತ್ವವನ್ನು ಚರ್ಚಿಸಲಾಗಿದೆ. ಸಾಧನೆಗಳ ಪ್ರತಿರೂಪವಾಗಿರುವ ಕಾರ್ನಾಡು ಸದಾಶಿವರಾಯರ ಬಗ್ಗೆ ಅನೇಕ ಗ್ರಂಥಗಳು ಲಭ್ಯವಾದರೂ ಯಾವುದೇ ಗ್ರಂಥವೂ ಇದುವರೆಗೂ ಅವರ ವ್ಯಕ್ತಿತ್ವದ ಎಲ್ಲಾ ರಂಗದ ಸಾಧನೆಯ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ನೀಡಿರುವುದಿಲ್ಲ. ಈ ಅಧ್ಯಾಯದಲ್ಲಿ ಅವರ ಬಗ್ಗೆ ಪ್ರಕಟವಾಗಿರುವ, ಅಪ್ರಕಟವಾಗಿರುವ ಗ್ರಂಥಗಳ

ಪರಿಚಯವನ್ನು ಮಾಡಿಕೊಡಲಾಗಿದೆ. ಈ ಪ್ರೌಢ ಪ್ರಬಂಧವನ್ನು ರಚಿಸಲು ಉಪಯೋಗಿಸಿದ ಮೂಲಾಧಾರಗಳ ಬಗ್ಗೆಯೂ ಹಾಗೂ ಪ್ರಬಂಧವನ್ನು ಸಿದ್ಧಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಚರ್ಚಿಸಲಾಗಿದೆ.

ಅಧ್ಯಾಯ ಎರಡು: ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ

ಭಾರತ ಸ್ವಾತಂತ್ರ್ಯ ಹೋರಾಟ ಜಗತ್ತಿನಲ್ಲಿಯೇ ಒಂದು ವಿಶೇಷವಾದ ಹಾಗೂ ವಿಭಿನ್ನವಾದ ಪ್ರಕ್ರಿಯೆ. ಪರಕೀಯರಾದ ಬ್ರಿಟಿಷರು ಭಾರತಕ್ಕೆ ಬಂದು ಭಾರತೀಯರ ಸ್ವಂತಿಕೆಯನ್ನು ಕಸಿದು, ಭಾರತ ನೆಲದಲ್ಲಿ ಭಾರತೀಯರನ್ನೇ ಪರಕೀಯರನ್ನಾಗಿದ ಘಟನೆಯು ಘೋರಯುತವಾಗಿದೆ. ಆ ಸಂದರ್ಭದಿಂದಲೇ ಪ್ರತಿ ಭಾರತೀಯನ ಮನದಲ್ಲಿ ಹೋರಾಟದ ಕಿಚ್ಚನ್ನು ಹಚ್ಚಿದ ಹೋರಾಟದ ಇತಿಹಾಸವೇ ಭಾರತ ಸ್ವಾತಂತ್ರ್ಯ ಹೋರಾಟ. ಬ್ರಿಟಿಷರ ದಾಸ್ಯಕ್ಕೆ ಒಳಗಾಗಿದ ಭಾರತವು ಅದಕ್ಕೆ ಸರಿಸಾಟಿಯಾಗಿ ಹೋರಾಡಿದ ಕಥನ ಅನನ್ಯವಾದುದು. ಹೋರಾಟ ಎಂದಾಕ್ಷಣ ನಮ್ಮ ಕಣ್ಣಿಗೆ ಗೋಚರಿಸುವುದು ಹಿಂಸೆ, ರಕ್ತಪಾತ, ಯುದ್ಧ ಇತ್ಯಾದಿ. ಆದರೆ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆ ಎಂಬ ನೂತನವಾದ ಸಾಧನವನ್ನು ಅನುಸರಿಸಿ ಸ್ವಾತಂತ್ರ್ಯವನ್ನು ಗಳಿಸಿರುವುದು ಜಗತ್ತೇ ನಿಬ್ಬೆರಗಾಗಿ ನೋಡುವಂತಾಯಿತು. ರಕ್ತರಹಿತವಾದ ಈ ಹೋರಾಟದ ಕಾರಣದಿಂದಾಗಿಯೇ ಭಾರತವು ಜಗತ್ತಿನ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಆದ್ದರಿಂದ ಇತಿಹಾಸ ಪುಟಗಳಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿಯು ಸುವರ್ಣ ಅಕ್ಷರಗಳಲ್ಲಿ ದಾಖಲಾಗುವಂತಹ ಐತಿಹಾಸಿಕ ಘಟನೆಯಾಗಿದೆ. ಆಧುನಿಕ ಸಮಾಜದಲ್ಲಿ ನಡೆದ ಅವಿಸ್ಮರಣೀಯ ಘಟನೆ ಎಂದರೆ ತಪ್ಪಾಗಲಾರದು. ಅನೇಕ ವೀರ ಹೋರಾಟಗಾರರ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ಮಹಾ ಕಥನವಾಗಿದೆ. ದೇಶದ ಮೂಲೆ ಮೂಲೆಯಲ್ಲೂ ಹೋರಾಟ, ಪ್ರತಿಭಟನೆಗಳ ರಣಕಹಳೆ ಮೊಳಗಿವೆ. ಈ ಹೋರಾಟದ ಛಾಯೆ ಕರ್ನಾಟಕ ಹಾಗೂ ರಾಜ್ಯದ ದಕ್ಷಿಣ ಕನ್ನಡದಲ್ಲೂ ಮೂಡಿವೆ ಎನ್ನುವುದಕ್ಕೆ ಹಲವಾರು ದಾಖಲೆಗಳಿವೆ.

ಪ್ರಸ್ತುತವಾಗಿ, ಈ ಅಧ್ಯಾಯದಲ್ಲಿ ಮೊದಲಿಗೆ ಸ್ವಾತಂತ್ರ್ಯ ಹೋರಾಟದ ಕುರಿತ ಇತಿಹಾಸ ಬರವಣಿಗೆಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಭಾರತ ಸ್ವಾತಂತ್ರ್ಯ ಹೋರಾಟದ ಕುರಿತು ಅನೇಕ ಇತಿಹಾಸಕಾರರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೇ ಈ ಚಳುವಳಿಯ ಕುರಿತು ವಿವಿಧ ವ್ಯಾಖ್ಯಾನಗಳನ್ನು ಕಾಣಬಹುದಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕುರಿತ ಬರವಣಿಗೆಗಳನ್ನು

ಅವಲೋಕಿಸಿದಾಗ ವಿವಿಧ ಆಯಾಮದ ಬರವಣಿಗೆಗಳನ್ನು ಪರಿಶೀಲಿಸಬಹುದು. ಭಾರತದ ಕುರಿತ ಬರವಣಿಗೆಗಳು ಬಹುತೇಕ ವಸಾಹತುಷಾಹಿ ಬರಹಗಾರರು ರಚಿಸಿದ ಚೌಕಟ್ಟಿನೊಳಗೆ ರೂಪಿಸಲ್ಪಟ್ಟಿವೆ. ರಾಷ್ಟ್ರೀಯವಾದಿ ಬರಹಗಾರರು, ಮಾರ್ಕ್ಸ್‌ವಾದಿ ಬರಹಗಾರರು ಅಥವಾ ಸಬಾಲ್ಟನ್ ಬರಹಗಾರರು ರಚಿಸಿದ ರಚನಾ ಕ್ರಮಗಳು ವಸಾಹತುಷಾಹಿ ನೆಲೆಕಟ್ಟಿನಲ್ಲಿ ರಚಿತವಾಗಿದ್ದು, ಇಂತಹ ವಿಮರ್ಶೆ, ಚರ್ಚೆಗಳು ಹಲವಾರು ದೃಷ್ಟಿಕೋನಗಳ ಕುರಿತು ವಿವರಿಸಲಾಗಿದೆ.

ಭಾರತ ಸ್ವಾತಂತ್ರ್ಯ ಹೋರಾಟದ ದೇಶವ್ಯಾಪಿ ಸ್ವರೂಪದಿಂದ ಹಿಡಿದು, ಕರ್ನಾಟಕದ ಹೋರಾಟದ ಹಲವು ಮಜಲುಗಳನ್ನು ವಿವರಿಸಲಾಗಿದೆ. ಭಾರತದಲ್ಲಿ ಬ್ರಿಟಿಷರ ಆಗಮನದ ನಂತರ ಉಂಟಾದ ಬದಲಾವಣೆಗಳು ಭಾರತವನ್ನು ಆರ್ಥಿಕ, ಸಾಮಾಜಿಕ, ರಾಜಕೀಯ, ಧರ್ಮದ ನೆಲೆಯಲ್ಲಿ ಶೋಷಣೆಗೆ ಒಳಪಡಿಸಿತು. ವಿವಿಧ ರೀತಿಯಲ್ಲಿ ಭಾರತದಲ್ಲಿ ತಮ್ಮ ಏಕ ಸಾಮ್ಯತೆಯನ್ನು ಸ್ಥಾಪಿಸಿದ ಬ್ರಿಟಿಷರು ಹಂತ ಹಂತವಾಗಿ ಭಾರತವನ್ನು ತಮ್ಮ ವ್ಯಾಪಾರದ ಲಾಭವನ್ನಾಗಿ ಮಾಡಿದರು. ಈ ಶೋಷಣೆಯನ್ನು ವಿರೋಧಿಸಿ ದೇಶದಾದ್ಯಂತ ದಂಗೆಗಳು, ಸ್ಥಳೀಯ ಹೋರಾಟಗಳು ನಡೆದು, ನಂತರದಲ್ಲಿ ಅದು ರಾಷ್ಟ್ರ ವ್ಯಾಪ್ತಿಯಾಗಿ ಹರಡಿ, ಹೋರಾಟದ ಹಾದಿಯಲ್ಲಿ ಅನೇಕ ನಾಯಕರುಗಳ ಪಾತ್ರವನ್ನು ಕಾಣಬಹುದಾಗಿದೆ. ನಂತರದ ಹಂತದಲ್ಲಿ ಹೋರಾಟವು ಗಾಂಧೀ ಪ್ರಣೀತವಾದ ಹೋರಾಟವಾಗಿ ಪರಿಣಮಿಸಿತು. ಗಾಂಧೀಜಿಯವರ ಹೋರಾಟದ ಕ್ಷಮತೆ ದೇಶದೆಲ್ಲೆಡೆ ಪಸರಿಸಿ ಕರ್ನಾಟಕ ರಾಜ್ಯವು ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಛಾಪನ್ನು ಮೂಡಿಸಿದೆ. ಟಿಪ್ಪುವಿನ ಮರಣದ ಬಳಿಕ ವಿಭಜಸಿಲ್ಪಟ್ಟ ಕರ್ನಾಟಕದ ಪ್ರಾಂತ್ರಗಳಲ್ಲಿ ಬ್ರಿಟಿಷರ ದಬ್ಬಾಳಿಕೆಯಿಂದ ಕೂಡಿದ ಆಡಳಿತವನ್ನು ವಿರೋಧಿಸಿ 1800 ರಿಂದ 1858 ರವರೆಗೆ ಬ್ರಿಟಿಷ್ ವಿರೋಧಿ ದಂಗೆಗಳು ಕರ್ನಾಟಕದಲ್ಲಿ ನಡೆದವು. 1800 ರಲ್ಲಿ ಧೋಂಡಿಯಾ ವಾಘ್ ನಡೆಸಿದ ದಂಗೆ, 1819 ರ ಕೊಪ್ಪಳದ ದಂಗೆ, 1820 ರಲ್ಲಿ ನಡೆದ ಬೀದರ್‌ನ ದಂಗೆ, 1824 ರ ರಾಣಿ ಚೆನ್ನಮ್ಮ ಹಾಗೂ ಕಿತ್ತೂರು ಸಂಸ್ಥಾನ ನಡೆಸಿದ ಹೋರಾಟ, 1835–37 ರ ರಲ್ಲಿ ನಡೆದ ಕೊಡಗು ಹಾಗೂ ಅಮರ ಸುಳ್ಯ ದಂಗೆ, ಸುರಪುರದ ಬಂಡಾಯ, ಹಲಗಲಿಯ ಬೇಡರ ಹೋರಾಟಗಳು ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕವು ಕೂಡ ಪ್ರಥಮ ಹಂತದಲ್ಲಿಯೇ ಪಾಲ್ಗೊಂಡಿವೆ ಎನ್ನುವುದಕ್ಕೆ ಸಾಕ್ಷಿಯಾಗಿವೆ. 1857 ರ ಸಿಪಾಯಿ ದಂಗೆಯ ಪರಿಣಾಮ ಕರ್ನಾಟಕದ ಪ್ರದೇಶಗಳಿಗೂ ತಟ್ಟಿದ್ದು, ಇದರ ಪ್ರಭಾವದಿಂದ ಸುರಪುರ, ಧಾರವಾಡ,ಬೆಳಗಾಂ, ಕೊಲ್ಲಾಪುರಗಳಲ್ಲಿ ದಂಗೆಗಳು ನಡೆದವು. ಈ ಎಲ್ಲಾ ಸಶಸ್ತ್ರ ಬಂಡಾಯಗಳ ಸಂದರ್ಭದಲ್ಲಿ ಬ್ರಿಟಿಷರ ಕುಟಿಲತನಕ್ಕೆ ಅನೇಕ ಹೋರಾಟಗಾರರು ಬಲಿಯಾಗಿದ್ದಾರೆ. ಈ ಹೋರಾಟಗಾರರಲ್ಲಿ ರಾಷ್ಟ್ರೀಯತೆಯ ಜಾಗೃತಿ ಇಲ್ಲದಿದ್ದರೂ

ಕೂಡ ಸ್ಥಳೀಯವಾಗಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯದ ರಣ ಕಹಳೆಯನ್ನು ಊದಿದರು. 1858 ರ ನಂತರ ನಡೆದ ದಂಗೆಗಳು ಸಂವಿಧಾನ ಬದ್ಧವಾಗಿ ನಡೆದವು. ಕ್ರಿ.ಶ. 1920 ರ ನಂತರದಲ್ಲಿ ಕರ್ನಾಟಕವು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರ ತೆರನಾದ ಭಾಗವಹಿಸಿರುವುದರ ಕುರಿತು ವಿವರಣೆಯನ್ನು ನೀಡಲಾಗಿದೆ.

ನಂತರ ದಕ್ಷಿಣ ಕನ್ನಡದ ಹೋರಾಟದ ಹಂತಗಳನ್ನು ಚರ್ಚಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಉಳಿದ ಜಿಲ್ಲೆಯಂತೆ ಪ್ರಾರಂಭದ ಹಂತದಲ್ಲಿ ಸಕ್ರಿಯವಾಗಿ ಭಾಗವಹಿಸದಿದ್ದರೂ ನಂತರದಲ್ಲಿ ಬ್ರಿಟಿಷರ ವಿರುದ್ಧ ದಂಗೆಗಳನ್ನು ನಡೆಸುವುದರ ಮುಖಾಂತರ ರಾಷ್ಟ್ರೀಯತೆಯನ್ನು ಸಾದರಪಡಿಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವು ಭಾಗಗಳಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧ, ಅವರ ದಬ್ಬಾಳಿಕೆಯ ವಿರುದ್ಧ ಹಲವಾರು ದಂಗೆಗಳು ನಡೆದಿವೆ. ಇವುಗಳಲ್ಲಿ 1800 ರಲ್ಲಿ ವಿಟ್ಲದ ಹೆಗಡೆ ಹಾಗೂ ಕೊಯಮತ್ತೂರಿನ ಸುಬ್ಬರಾವ್ ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟವು ದಕ್ಷಿಣ ಕನ್ನಡದಲ್ಲಿ ಬ್ರಿಟಿಷರ ವಿರುದ್ಧ ನಡೆದ ಪ್ರಥಮ ದಂಗೆ ಎನ್ನಬಹುದು. ನಂತರ 1799 ರಿಂದ 1920 ರ ತನಕ, 1920 ರಿಂದ 1930 ರ ತನಕ, 1930 ರಿಂದ 1941 ರ ತನಕ ಮತ್ತು 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ, ಈ ರೀತಿ ಹೋರಾಟದ ವಿವಿಧ ಹಂತಗಳಲ್ಲಿ ದಕ್ಷಿಣ ಕನ್ನಡದ ಹೋರಾಟಗಾರರು, ನಾಯಕರು ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಕಾಣಬಹುದು. 20ನೇ ಶತಮಾನದಲ್ಲಿ ಉಂಟಾದ ರಾಷ್ಟ್ರೀಯ ಚಳುವಳಿಗೆ, ಪ್ರಭಾವವನ್ನು ಉಂಟುಮಾಡಿದ ಬ್ರಹ್ಮ ಸಮಾಜ, ಆರ್ಯ ಸಮಾಜ ಹಾಗೂ ಥಿಯೋಸೋಫಿಕಲ್ ಸಂಸ್ಥೆಗಳ ಶಾಖೆಗಳು ಮಂಗಳೂರಿನಲ್ಲಿ ಪ್ರಾರಂಭವಾದವು. ಅದರ ಪರಿಣಾಮದಿಂದ ಮಂಗಳೂರಿನ ರಾಷ್ಟ್ರೀಯ ಚಳುವಳಿಯಲ್ಲಿ ಹಲವು ಬೆಳವಣಿಗೆಗಳು ಉಂಟಾದವು. ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡಿರುವಂತಹ ಸುಧಾರಕರು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಳ್ಳುವ ನಡೆಯನ್ನು ಕಂಡುಕೊಂಡು ಗಾಂಧೀಜಿಯವರ ಮಾರ್ಗದರ್ಶನದ ಮೂಲಕ ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರತಿಧ್ವನಿ ಕೇಳತೊಡಗಿತು. ಇದರ ಸವಿಸ್ತಾರವಾದ ಹೋರಾಟದ ಹಲವು ಮಜಲುಗಳನ್ನು ಪರಿಶೀಲಿಸಲಾಗಿದೆ.

ಅಧ್ಯಾಯ 03: ಕಾರ್ನಾಡು ಸದಾಶಿವರಾವ್: ಪರಿಚಯ ಮತ್ತು ದಕ್ಷಿಣ ಕನ್ನಡದಲ್ಲಿ ಗಾಂಧೀ ಪೂರ್ವ ಪರಿಕಲ್ಪನೆಗಳಲ್ಲಿ ಸದಾಶಿವರಾವ್‌ರವರ ಕೊಡುಗೆಗಳು

ಅಧ್ಯಯನದ ಕೇಂದ್ರ ಬಿಂದುವಾಗಿರುವ ಕಾರ್ನಾಡು ಸದಾಶಿವರಾಯರ ಪ್ರವೇಶ ಈ ಅಧ್ಯಾಯದಿಂದ ಪ್ರಾರಂಭವಾಗುತ್ತದೆ. ಅವರ ಜೀವನ, ಬಾಲ್ಯ, ಶಿಕ್ಷಣ, ವೃತ್ತಿ ಹಾಗೂ ರಾಜಕೀಯದ

ಕಡೆಗೆ ಇಟ್ಟಂತಹ ಹೆಜ್ಜೆ ಹಾಗೂ ದಕ್ಷಿಣ ಕನ್ನಡಕ್ಕೆ ಗಾಂಧೀ ಆಗಮನಕ್ಕಿಂತ ಪೂರ್ವದಲ್ಲಿ ಜಿಲ್ಲೆಯಲ್ಲಿ ಸದಾಶಿವರಾಯರು ಕೈಗೊಂಡಂತಹ ಸಮಾಜ ಸುಧಾರಣೆಗಳ ಕುರಿತು ಮೂರನೇಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಕಾರ್ನಾಡು ಸದಾಶಿವರಾವ್‌ರವರು ಶ್ರೀಮಂತ ಸಾರಸ್ವತ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಕಾರ್ನಾಡು ಭಾರದ್ವಾಜ ರಾಮಚಂದ್ರರಾಯರು ಮಂಗಳೂರಿನ ಗಣ್ಯ ವಕೀಲರು. ತಾಯಿ ರಾಧಾ ಬಾಯಿಯವರ ಕರುಣೆ, ಅನುಕಂಪ ,ದಯೆಯನ್ನು ಮೈಗೂಡಿಸಿಕೊಂಡು ಬೆಳೆದ ಸದಾಶಿವರಾವ್ ಕಟ್ಟು ನಿಟ್ಟಿನ ಜೀವನ ನಡೆಸಿದರು. ಕ್ರಿ.ಶ. 1881 ರ ಯುಗಾದಿ ಹಬ್ಬದಂದು ಹುಟ್ಟಿದ ಕಾರ್ನಾಡು ಸದಾಶಿವರಾಯರು ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಪಡೆದರು. ಮುಂಬಯಿಯಲ್ಲಿ ಪದವಿ ಶಿಕ್ಷಣ ಹಾಗೂ ಕಾನೂನು ಶಿಕ್ಷಣವನ್ನು ಪಡೆದರು. ಊರಿನ ಶ್ರೀಮಂತರೆನಿಸಿಕೊಂಡರೂ ಕೂಡ ಸರಳ ಜೀವನವನ್ನು ನಡೆಸಿ ಎಲ್ಲರಿಗೂ ಆದರ್ಶಪ್ರಾಯರಾಗಿದ್ದರು. ಇಂತಹ ಸರಳ ವ್ಯಕ್ತಿಯ ಜೀವನದ ಮೌಲ್ಯಗಳು, ಆದರ್ಶಗಳು ಅವರ ಜೀವನದ ಉದ್ದೇಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಕಾದಂಬರಿಗಳಲ್ಲಿ ಕಾರ್ನಾಡು ಸದಾಶಿವರಾಯರು ಒಬ್ಬ ಸ್ಫೂರ್ತಿದಾಯಕ ವ್ಯಕ್ತಿಯಾಗಿ ಹೊರ ಹೊಮ್ಮಿರುವ ಕುರಿತು ಚರ್ಚಿಸಲಾಗಿದೆ. ಶಿವರಾಮ ಕಾರಂತರು ಕಾರ್ನಾಡು ಸದಾಶಿವರಾಯರನ್ನು ತೀರ ಹತ್ತಿರದಿಂದ ಬಲ್ಲವರಾಗಿದ್ದು, ಅವರ ಸಮೀಪದ ಸ್ನೇಹ, ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದವರಲ್ಲಿ ಶಿವರಾಮ ಕಾರಂತರು ಒಬ್ಬರಾಗಿದ್ದರಿಂದ ಅವರ ತ್ಯಾಗ ಆದರ್ಶದ ಜೀವನವನ್ನು ಪ್ರತ್ಯಕ್ಷವಾಗಿ ಕಂಡು ತಮ್ಮ ಕಾದಂಬರಿಗಳಲ್ಲಿ ವರ್ಣಿಸಿದ್ದಾರೆ. ಅವರ ಔದಾರ್ಯದ ಉರುಳಲ್ಲಿ, ಸ್ಮೃತಿ ಪಟಲದಿಂದ, ಹುಚ್ಚು ಮನಸ್ಸಿನ ಹತ್ತು ಮುಖಗಳು ಕಾದಂಬರಿಗಳಲ್ಲಿ ಕಾರ್ನಾಡು ಸದಾಶಿವರಾಯರ ವ್ಯಕ್ತಿತ್ವದ ಅನಾವರಣವಾಗಿದೆ. ಅಲ್ಲದೇ ಎಚ್. ನಾಗವೇಣಿಯವರ ಗಾಂಧಿ ಬಂದ ಕಾದಂಬರಿಯಲ್ಲಿ ಕಾರ್ನಾಡು ಸದಾಶಿವರಾಯರ ವ್ಯಕ್ತಿತ್ವದ ಪರಿಚಯವನ್ನು ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಮುಖ್ಯವಾಗಿ, ಕಾರ್ನಾಡು ಸದಾಶಿವರಾಯರ ಸಮಾಜ ಸುಧಾರಣಾ ಕಾರ್ಯಗಳನ್ನು ವಿವರಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಗಾಂಧೀಜಿ ಆಗಮನಕ್ಕಿಂತ ಮೊದಲು ಜಿಲ್ಲೆಯಲ್ಲಿ ರಾಷ್ಟ್ರೀಯತೆಯ ಪರ್ವ ಪ್ರಾರಂಭವಾಗುತ್ತದೆ. ಬಂಗಾಳದ ಸಿದ್ಧಾಂತಗಳು, ಸುಧಾರಣಾ ಪದ್ದತಿಗಳು ಮಂಗಳೂರಿನ ಕಡೆಗೆ ದಾಪುಗಾಲಿಟ್ಟು ಸುಧಾರಣಾ ಅಲೆಯನ್ನು ಸೃಷ್ಟಿಸಿತು. ಇದರಿಂದ ಪ್ರೇರೆಪಿತರಾದ ಕಾರ್ನಾಡು ಸದಾಶಿವರಾಯರು ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಬದಲಾವಣೆಯಲ್ಲಿ ಮಹತ್ತರವಾದ ಕೊಡುಗೆಗಳನ್ನು ನೀಡಿದರು. ಬ್ರಿಟಿಷರ ಆಳ್ವಿಕೆಯಿಂದ ನಲುಗಿದ ಭಾರತವನ್ನು ಬಿಡುಗಡೆಗೊಳಿಸುವುದಕ್ಕಿಂತ ಮೊದಲಾಗಿ ಸಮಾಜದಲ್ಲಿನ ಮೌಢ್ಯತೆ, ಅನಿಷ್ಟ ಪದ್ಧತಿಗಳಿಂದ ಸುತ್ತುವರಿದು ಜಡತ್ವದಿಂದ ಕೂಡಿದ

ಸಮುದಾಯಗಳನ್ನು ವ್ಯಕ್ತಿತ್ವ ದಾಸ್ಯದಿಂದ ಮುಕ್ತಿಗೊಳಿಸುವುದು ಬಹು ಮುಖ್ಯವಾದುದೆಂದು ಸದಾಶಿವರಾಯರು ದೂರದೃಷ್ಟಿಯುಳ್ಳ ಚಿಂತನೆಗೈದರು. ಅವರು ಬಂಗಾಳಿ ಸಿದ್ಧಾಂತಗಳಿಂದ ಪ್ರಭಾವಿತರಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಧಾರಣಾ ಅಲೆಯನ್ನು ಸೃಷ್ಟಿಸಿದರು. ಅವುಗಳಲ್ಲಿ ಮುಖ್ಯವಾಗಿ ಪಂಚಮರ ಕಲ್ಯಾಣ ಕಾರ್ಯಗಳು, ಮಹಿಳಾ ಸಮಾನತೆ ಮುಂತಾದ ಸುಧಾರಣಾ ಕ್ರಮಗಳನ್ನು ಕೈಗೊಂಡರು. ಆಗಿನ ಕಾಲದಲ್ಲಿ ದಲಿತರನ್ನು ಸಮಾಜದಿಂದ ದೂರವಿರಿಸಿದ ಕಾಲವದು. ಮೂಢ ನಂಬಿಕೆಗಳು ಹೊದ್ದು ಮಲಗಿದ್ದ ಸಂದರ್ಭದಲ್ಲಿ ಜಾತಿ ಭೇದವನ್ನು ಹೋಗಲಾಡಿಸುವ ಸಲುವಾಗಿ, ಅನಾಚಾರ ಪದ್ಧತಿಗಳನ್ನು ಮೆಟ್ಟಿ ನಿಂತು, ಅಂಧ ವಿಶ್ವಾಸಗಳನ್ನು ಹೋಗಲಾಡಿಸಬೇಕೆಂದು ಪಣ ತೊಟ್ಟು ನಿಂತವರು ಸದಾಶಿವರಾಯರು. ಈ ಸಂದರ್ಭದಲ್ಲಿ ದಲಿತೋದ್ಧಾರಕ ಕುದ್ಮಲ್ ರಂಗರಾವ್ ರವರು ದಲಿತರ ಶೋಷಣೆಯ ವಿರುದ್ಧ ಧ್ವನಿ ಎತ್ತಿದರು. ಇವರಿಂದ ಪ್ರೇರಣೆಗೊಂಡು ದಲಿತೋದ್ಧಾರಕ ಕಾರ್ಯಗಳನ್ನು ಕೈಗೊಂಡರು ಹಾಗೂ ದಲಿತರ ಪರವಾಗಿ ಹೋರಾಟ ಮಾಡಿದ ಸಂದರ್ಭದಲ್ಲಿ ಹಲವು ಎಡರು ತೊಡರುಗಳಿಗೆ ಗುರಿಯಾದುದ್ದನ್ನು ವಿವರಿಸಲಾಗಿದೆ.

ವಸಾಹತುಷಾಹಿ ಆಳ್ವಿಕೆಯ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ವರ್ಗವು ಸಮಾಜದಿಂದ ದೂರವಾಗಿ ಉಳಿದಿತ್ತು. ಅನೇಕ ಕಟ್ಟು ಪಾಡುಗಳಿಂದ ಸುತ್ತುವರಿದು, ಕೇವಲ ಮನೆಯ ನಾಲ್ಕು ಗೋಡೆಯನ್ನೇ ತಮ್ಮ ಸಮಾಜ ಎಂದು ಭಾವಿಸಿ, ಗೃಹ ಕಾರ್ಯಕಲಾಪಗಳಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು. ದೀನ ದಲಿತರ ಬಡವರ ಮನೆಯ ಮಹಿಳೆಯರ ಸ್ಥಿತಿಯಂತೂ ಕಠೋರತೆಯಿಂದ ಕೂಡಿತ್ತು. ಅಂದಿನ ಮಂಗಳೂರಿನ ಬ್ರಾಹ್ಮಣ ಸಮಾಜ ಅಥವಾ ಇತರ ಸಾಂಪ್ರದಾಯಿಕ ಬ್ರಾಹ್ಮಣೇತರ ಸಮಾಜವು ವಿಧವಾ ವಿವಾಹ, ಬಾಲ್ಯ ವಿವಾಹ ವಿರೋಧಕ್ಕೆ ಪ್ರೋತ್ಸಾಹ ನೀಡುತ್ತಿರಲಿಲ್ಲ. ಈ ಬಾಲ್ಯ ವಿವಾಹವೆಂಬ ಕೂಪದಲ್ಲಿ ಬಿದ್ದು ಸಾವಿರಾರು ಅಪ್ರಾಪ್ತ ಹೆಣ್ಣು ಮಕ್ಕಳು ನರಳುತ್ತಿದ್ದರು. ಬಾಲ ವಿಧವೆಯರಾಗಿ ತಲೆ ಬೋಳಿಸಿಕೊಂಡು ಜೀವನ ಪರ್ಯಂತ ಕತ್ತಲ ಕೋಣೆಯೊಳಗೆ ಬಂಧಿಯಾಗಿರುತ್ತಿದ್ದರು. ಈ ಅಮಾನುಷ ಕೃತ್ಯಕ್ಕೆ ಕಡಿವಾಣ ಹಾಕಲು ನಿರ್ಧರಿಸಿದ ಕಾರ್ನಾಡು ಸದಾಶಿವರಾಯರು ಮಹಿಳಾ ಸಬಲೀಕರಣಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಬ್ರಹ್ಮ ಸಮಾಜವು ಯೋಜಿಸಿದ ಹಲವಾರು ಚಟುವಟಿಕೆಗಳಲ್ಲಿ ಕೈ ಜೋಡಿಸಿದರು. ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಬಾಲ್ಯ ವಿವಾಹ, ಸತಿ–ವಿಧವಾ ವಿವಾಹ ನಿಷೇಧ ಮುಂತಾದ ಅನಿಷ್ಟ ಪದ್ದತಿಗಳ ನಿವಾರಣೆ ಹಾಗೂ ಅಬಲೆ ಸ್ತ್ರೀಯರಿಗಾಗಿ ಸದಾಶಿವರಾಯರು ನೆರವೇರಿಸಿದ ಸುಧಾರಣಾ ಕಾರ್ಯಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ 4: ದಕ್ಷಿಣ ಕನ್ನಡದಲ್ಲಿ ಗಾಂಧೀ ಆಗಮನೋತ್ತರದ ಬೆಳವಣಿಗೆಯಲ್ಲಿ ಭಾರತ ಸ್ವಾತಂತ್ರ್ಯ ಹೋರಾಟಗಾರನಾಗಿ ಕಾರ್ನಾಡು ಸದಾಶಿವರಾವ್ ಮತ್ತು ರಚನಾತ್ಮಕ ಕಾರ್ಯಕ್ರಮಗಳು

ಸ್ವಾತಂತ್ರ್ಯ ಹೋರಾಟಗಾರನಾಗಿ ಕಾರ್ನಾಡು ಸದಾಶಿವರಾಯರ ಹೋರಾಟದ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಕಹಳೆ ಎಲ್ಲೆಡೆ ಮೊಳಗಿಸಿದವರಲ್ಲಿ ಶ್ರಮಿಸಿದವರು ಕಾರ್ನಾಡು ಸದಾಶಿವರಾವ್. ಜಿಲ್ಲೆಯ ಪ್ರತಿಯೊಬ್ಬನಲ್ಲೂ ದೇಶಭಕ್ತಿ ಮೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಿದರು. ಸದಾಶಿವರಾವ್ ಕರ್ನಾಟಕ ಕಂಡ ಅಪ್ಪಟ ದೇಶಭಕ್ತ. ದಕ್ಷಿಣ ಕನ್ನಡ ಜಿಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ತ್ಯಾಗ ಬಲಿದಾನಕ್ಕೆ ಸಾಕ್ಷಿಯಾಗಿರುವ ಕಲಿಯುಗದ ಕರ್ಣ ಎಂದು ಹೆಸರು ಗಳಿಸಿದ ಇಂತಹ ದೇಶಭಕ್ತನ ರಾಜಕೀಯ ಪ್ರವೇಶದ ಕುರಿತು ಚರ್ಚಿಸಲಾಗಿದೆ.

ಭಾರತ ದೇಶ ಬ್ರಿಟಿಷರ ದಾಸ್ಯದಲ್ಲಿ ನಲುಗಿತ್ತಿದ್ದ ಸಂದರ್ಭದಲ್ಲಿ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಭಾರತೀಯರು ಹೋರಾಡುತ್ತಿದ್ದ ಕಾಲದಲ್ಲಿ ಎನ್ನಿಬೆಸೆಂಟ್ ಹಾಗೂ ಅವರ ಬೆಂಬಲಿಗರು ಈ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ಕಾರಣಕ್ಕಾಗಿ ಬ್ರಿಟಿಷ್ ಸರಕಾರದ ಕ್ರೋಧಕ್ಕೆ ತುತ್ತಾಗಿ ಇವರನ್ನು ಸ್ಥಾನ ಬದ್ಧತೆಯಲ್ಲಿ ಇರಿಸಿತು. ಬ್ರಿಟಿಷರ ಈ ಧೋರಣೆಯನ್ನು ಭಾರತೀಯರು ತೀವ್ರವಾಗಿ ವಿರೋಧಿಸಿದರು. ಈ ಅಸಮಾಧಾನಕ್ಕೆ ಒಂದು ಕ್ರಮಬದ್ಧವಾದ ಪರಿಧಿಯನ್ನು ಕಲ್ಪಿಸಬೇಕೆಂದು ಹಾಗೂ ಆನ್ನಿಬೆಸೆಂಟ್‌ರ ಚಳುವಳಿಯನ್ನು ಅಹಿಂಸಾತ್ಮಕವಾಗಿ ನಡೆಸಿಕೊಂಡು ಹೋಗಬೇಕೆಂಬ ದೀರ್ಘವಾದ ಪತ್ರವನ್ನು ಸದಾಶಿವರಾಯರು ಗಾಂಧಿಜಿಯವರಿಗೆ ಕ್ರಿ.ಶ. 1917 ರ ಅಗಸ್ಟ್ 26 ರಂದು ಬರೆದಿರುತ್ತಾರೆ. ಮಹಾತ್ಮ ಗಾಂಧೀಜಿಯವರ ತತ್ವ–ಸಿದ್ಧಾಂತಗಳು, ಅವರು ರೂಪಿಸಿರುವ ಯೋಜನೆಗಳಿಂದ ಪ್ರಭಾವಿತರಾಗಿ ಕಾರ್ನಾಡು ಸದಾಶಿವರಾಯರು, ಭಾರತ ಸ್ವಾತಂತ್ರ್ಯ ಹೋರಾಟದ ಚುಕ್ಕಾಣಿಯನ್ನು ಹಿಡಿಯಲು ಗಾಂಧೀಜಿಯವರೇ ಸೂಕ್ತವಾದ ನಾಯಕ ಎಂದು ಮನಗಂಡಿದ್ದರು. ಗಾಂಧೀಜಿಯರು ತಮ್ಮ ಜೀವನವನ್ನು ಭಾರತ ಮಾತೆಯ ಸೇವೆಗೆ ಮುಡಿಪಾಗಿಟ್ಟಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ಭಾರತದ ಮೂಲೆ ಮೂಲೆಯನ್ನು ಪ್ರವಾಸಗೈಯುತ್ತಿರುವ ಗಾಂಧೀಜಿಯವರ ಅರ್ಪಣೆಯ ಮನೋಭಾವನೆಯನ್ನು ಮನಗಂಡ ಕಾರ್ನಾಡು ಸದಾಶಿವರಾಯರು ಅವರನ್ನು ಮಂಗಳೂರಿಗೂ ಆಹ್ವಾನಿಸಿದ್ದರು. ಭಾರತದಲ್ಲಿ ಎಲ್ಲಾ ಭಾಗದಲ್ಲಿಯೂ ಶಾಂತಿಮಯ ಪ್ರತಿಕಾರದ ವಾತಾವರಣವು ಸೃಷ್ಟಿಯಾಗತೊಡಗಿತು. ಗಾಂಧೀಜಿಯವರ ನಾಯಕತ್ವದಲ್ಲಿ ಈ ಹೋರಾಟವು ಎಂದಿಗೂ ವಿಫಲವಾಗದು. ಹಾಗಾಗಿ ಬ್ರಿಟಿಷರ ವಿರುದ್ಧ ಭಾರತೀಯರು ನಡೆಸುತ್ತಿರುವ ಈ ಶಾಂತಿಮಯ ಹೋರಾಟದ ಮುಂದಾಳತ್ವವನ್ನು

ಗಾಂಧೀಜಿಯವರು ವಹಿಸಬೇಕೆಂಬುದಾಗಿ ಸದಾಶಿವರಾಯರು ತಾವು ಬರೆದ ಪತ್ರದಲ್ಲಿ ವಿನಮ್ರವಾಗಿ ವಿನಂತಿಸಿಕೊಂಡಿರುತ್ತಾರೆ. ಗಾಂಧೀಜಿಯವರು ಮಂಗಳೂರಿಗೆ ಆಗಮಿಸಿ ಭಾಷಣಗೈದಿರುವ ಸಾರಾಂಶವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಗಾಂಧೀಜಿಯವರು ಮಂಗಳೂರಿಗೆ ಆಗಮಿಸಿದ ಬಳಿಕ ಸದಾಶಿವರಾಯರು ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಸಾಗಿ ಒಬ್ಬ ಅಪ್ಪಟ ದೇಶಭಕ್ತನಾಗಿ ದೇಶ ಸೇವೆಯಲ್ಲಿಯೇ ನಿರತರಾದರು.

ಕ್ರಿ.ಶ. 1919–1920 ರ ಸಂದರ್ಭದಲ್ಲಿ ಗಾಂಧೀಜೀಯವರು ರಾಷ್ಟ್ರ ವ್ಯಾಪ್ತಿ ಸ್ವಾತಂತ್ರ್ಯದ ಕರೆ ನೀಡಿದಾಗ ಆ ಕರೆಗೆ ತಲೆದೂಗಿದ ಸದಾಶಿವರಾಯರು ತಮ್ಮ ವಕೀಲ ವೃತ್ತಿಯನ್ನು ತೊರೆದು ತಾಯ್ನಾಡಿನ ಸೇವೆಗೆ ಧುಮುಕಿದರು. ಹೋರಾಟದ ಕುರಿತು ಕಾರ್ನಾಡು ಸದಾಶಿವರಾಯರು ಮಂಗಳೂರಿನ ಜನರನ್ನುದ್ದೇಶಿಸಿ ಕೈಗೊಂಡಂತಹ ಭಾಷಣದ ಸಾರಾಂಶವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ರಾಷ್ಟ್ರೀಯ ಚಳುವಳಿಯ ಪ್ರಚಾರಕ್ಕಾಗಿ ಜಿಲ್ಲೆಯಾದ್ಯಂತ ಸಂಚರಿಸಿದ ಕಾರ್ನಾಡು ಸದಾಶಿವರಾಯರು ವಿದೇಶಿ ನೀತಿಯ ವಿರುದ್ಧ ಸಮರ ಸಾರಿಸಿದರು. ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಸ್ವದೇಶ ಚಳುವಳಿಯಲ್ಲಿ ಮುಂಚೂಣಿ ವಹಿಸಿದರು. ಅದಲ್ಲದೇ ಮದ್ಯಪಾನ ವಿರೋಧಿ ಚಳುವಳಿ, ರೈತರ ಹೋರಾಟದಲ್ಲಿಯೂ ಕೂಡ ತಮ್ಮ ಪಾತ್ರವನ್ನು ನಿರ್ವಹಿಸಿರುವುದರ ಕುರಿತು ಚರ್ಚಿಸಲಾಗಿದೆ.

ಈ ಸಂದರ್ಭದಲ್ಲಿ ದೇಶದಲ್ಲಿ ಕಾಂಗ್ರೆಸ್ ವಿಸ್ತಾರಗೊಂಡಿದ್ದರೂ ಕೂಡ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್‌ನ ಪ್ರವೇಶ ಉಂಟಾಗಲಿಲ್ಲ. ಕ್ರಿ.ಶ. 1920 ರಲ್ಲಿ ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಮತ್ತು ಕ್ರಿ.ಶ. 1920 ರಲ್ಲಿ ನಡೆದ ನಾಗಪುರ ಅಧಿವೇಶನವು ಕರ್ನಾಟಕದ ರಾಜಕೀಯದಲ್ಲಿ ಹಲವು ಬದಲಾವಣೆಗೆ ಕಾರಣವಾಯಿತು. ದಕ್ಷಿಣದ ಗಾಂಧೀ ಎಂದೇ ಕರೆಯಲ್ಪಡುವ ಕಾರ್ನಾಡುರವರ ರಾಜಕೀಯ ಚಟುವಟಿಕೆಗಳು, ಗಾಂಧೀಜಿಯವರ ಜೊತೆಗಿನ ಒಡನಾಟ, ಕಾಂಗ್ರೆಸ್ ಸಮಿತಿಯಲ್ಲಿನ ಪಾತ್ರ, ದೇಶಾದ್ಯಾಂತ ತಮ್ಮ ಕಾರ್ಯ ಪ್ರಮತೆಯನ್ನು ಸಾಗಿಸಿರುವುದರ ಕುರಿತಾದ ವಿಷಯಗಳನ್ನು ಗುರುತಿಸಲಾಗಿದೆ. ರಾಷ್ಟ್ರೀಯ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿ, ಅಲ್ಲಿನ ನಿರ್ಣಯಗನುಸಾರವಾಗಿ ಕರ್ನಾಟಕದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಂಡಳಿ, ಸಭೆಗಳನ್ನು ನಡೆಸಿ, ಕಾಂಗ್ರೆಸ್‌ನ ಪ್ರಚಾರ, ಅದರ ಧ್ಯೇಯೋದ್ದೇಶವನ್ನು ಪಸರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು. "ಪ್ರತಿಯೊಂದು ಮನೆಯೂ ಕಾಂಗ್ರೆಸ್‌ನದು, ಪ್ರತಿ ವ್ಯಕ್ತಿಯೂ ಕಾಂಗ್ರೆಸಿಗ" ಎಂಬ

ಸಂದೇಶವನ್ನು ಹರಡಿಸುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಸಮಿತಿಯ ಅಭಿವೃದ್ಧಿಗೆ ಸದಾಶಿವರಾಯರು ಅಪಾರವಾದ ಕೊಡುಗೆಯನ್ನು ನೀಡಿರುವುದರ ಜೊತೆಗೆ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯಲ್ಲಿ ಕಾರ್ನಾಡು ಸದಾಶಿವರಾಯರು ಕೆಲವೊಂದು ನಿರ್ಧಾರಗಳನ್ನು ಕೈಗೊಂಡು, ಪ್ರತಿ ತಾಲೂಕುಗಳಲ್ಲಿ ಕಾಂಗ್ರೆಸ್ ಸಮಿತಿಯ ಸದಸ್ಯರು ಸ್ವಯಂ ಸೇವಕರ ಮಂಡಲವನ್ನು ಒಟ್ಟುಗೂಡಿಸಿ, ದಕ್ಷಿಣ ಕನ್ನಡ ಜಿಲ್ಲಾ ಸ್ವಯಂ ಸೇವಕ ಮಂಡಳಿಯ ಏಳಿಗೆಗೂ ಕಾರಣರಾಗಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದ್ದು, ಈ ಹೋರಾಟಗಾರರು ಕಾರ್ನಾಡು ಸದಾಶಿವರಾಯರ ಪ್ರೇರಣೆಯಿಂದ, ಮಾರ್ಗದರ್ಶನದಿಂದ ಹೋರಾಟದ ಹಾದಿ ತುಳಿದು ದೇಶ ಸೇವೆಯಲ್ಲಿ ಅನೇಕರು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಮುಖ್ಯವಾಗಿ ಎಚ್.ಕೆ ತಿಂಗಳಾಯ, ಅರೆಬೈಲು ಭೋಜರಾವ್, ಭಿಡೆ ಶೇಷ ಭಟ್ಟರು, ಬೆಳ್ಳಿಪ್ಪಾಡಿ ವೆಂಕಪ್ಪ ರೈ, ಎಂ.ಮಾಧವರಾವ್, ಎಂ.ಉಮೇಶ್‌ರಾಯರು, ಎಂ.ಜಿ ಹೈದರ್ ರವರು ಸದಾಶಿವರಾಯರ ಸಮಕಾಲಿನ ಹೋರಾಟಗಾರರಾಗಿದ್ದು, ದೇಶದ ಹೋರಾಟ್ದಲ್ಲಿ ಅಗಣ್ಯವಾದ ಕೊಡುಗೆಯನ್ನು ನೀಡಿರುತ್ತಾರೆ. ಅದಲ್ಲದೇ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ಸತ್ಯಾಗ್ರಹಿಗಳ ಪಾತ್ರವೂ ಅಪಾರವಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮಗಳನ್ನು ಮುಖ್ಯ ಸಾಧನವಾಗಿ ಬಳಸಿದ್ದು, ಗಾಂಧೀಜಿಯವರ ಮಾರ್ಗದರ್ಶನದ ಮೇರೆಗೆ ಕಾರ್ನಾಡು ಸದಾಶಿವರಾಯರು ದಕ್ಷಿಣ ಕನ್ನಡದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅವುಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಬಹು ಮುಖ್ಯವಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಸದಾಶಿವರಾಯರು ಸಮಾಜದಲ್ಲಿನ ನಿರುದ್ಯೋಗ ಹಾಗೂ ಬಡತನವನ್ನು ನಿವಾರಿಸಲು ಗ್ರಾಮೋದ್ಯೋಗ, ಖಾದಿ ಉತ್ಪಾದನೆ, ಅಸ್ಪೃಶ್ಯತಾ ನಿವಾರಣೆಯನ್ನು ಕೈಗೊಳ್ಳುವ ಗುರಿಯನ್ನು ಹೊಂದಿದ್ದರು. ದಕ್ಷಿಣ ಕನ್ನಡದಲ್ಲಿ ಈ ಕುರಿತ ಕಾರ್ಯಕ್ರಮಗಳ ಪ್ರಚಾರ ಆಗಿನ ಕಾಲ ಘಟ್ಟದಲ್ಲಿ ನಡೆದಿರುವುದು ಬಹಳ ಕಡಿಮೆಯಾಗಿತ್ತು. ಈ ಉದ್ದೇಶ ಸಾಧನೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇವುಗಳ ಜೊತೆಗೆ ನೆರೆ ಪರಿಹಾರ ಕಾರ್ಯ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ಹಿಂದೀ ಭಾಷಾ ಪ್ರಚಾರ ಕಾರ್ಯಕ್ರಮಗಳು, ಮೀಸಲು ಅರಣ್ಯ

ಕಾನೂನಿಗೆ ಸಂಬಂಧಿತ ಕಾರ್ಯಗಳು ಸದಾಶಿವರಾಯರ ಕಾರ್ಯ ವೈಖರಿಗೆ ಸಾಕ್ಷಿಯಾಗಿದ್ದವು. ಸದಾಶಿವರಾಯರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಕರ್ನಾಟಕದ ಏಕತೆಗೂ ಪರೋಕ್ಷವಾಗಿ ತಮ್ಮ ಕೊಡುಗೆಗಳನ್ನು ನೀಡಿರುತ್ತಾರೆ. ಕರ್ನಾಟಕದ ಏಕೀಕರಣದ ಪರಿಕಲ್ಪನೆಗೆ ಪೂರಕವಾಗಿ ಕಾರ್ನಾಡು ಸದಾಶಿವರಾಯರು ಶ್ರಮಿಸಿರುವ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಸದಾಶಿವರಾಯರ ಜೀವನದ ಕೊನೆಯ ಹಂತಗಳು ಕಷ್ಟ ಕಾರ್ಪಣ್ಯದಿಂದ ಕೂಡಿತ್ತು. ಫೈಜಾಪುರದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನವು ಅವರ ಜೀವನದ ಕೊನೆಯ ಸಮ್ಮೇಳನವಾಯಿತು. ನಂತರದ ಅವರ ಬದುಕು ತೀರ ದುಃಖಮಯವಾಗಿತ್ತು. ದಾನ ವಿತ್ತ ಹಸ್ತವು ಬರಡಾಯಿತು. ಅವರ ಕೊನೆಯ ಜೀವನದ ದಾರುಣಮಯ ಕಥನವನ್ನು ಈ ಅಧ್ಯಾಯದ ಕೊನೆಯ ಹಂತದಲ್ಲಿ ವಿವರಿಸಲಾಗಿದೆ. ಅವರ ಮರಣದ ಯಾತ್ರೆ, ಪ್ರಸಿದ್ಧ ವ್ಯಕ್ತಿಗಳ ಅಂತಿಮ ನಮನದ ಸಂದೇಶಗಳನ್ನು ಹಾಗೂ ಪತ್ರಿಕೆಗಳು ಪ್ರಕಟಿಸಿದ ನಿಧನದ ವಾರ್ತೆಯ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ 05: ಉಪಸಂಹಾರ

ಈ ಸಂಶೋಧನಾ ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳನ್ನು, ಫಲಿತಗಳನ್ನು ಈ ಅಧ್ಯಾಯದಲ್ಲಿ ಉಪಸಂಹಾರವಾಗಿ ವಿವರಿಸಲಾಗಿದೆ. ಕಾರ್ನಾಡು ಸದಾಶಿವರಾಯರ ಸ್ವಾತಂತ್ರ್ಯ ಹೋರಾಟ, ಸಾಮಾಜಿಕ ಚಟುವಟಿಕೆಗಳ ವಿಸ್ತೃತ ಪಟ್ಟಿಯನ್ನು ನೀಡಲಾಗುತ್ತಿದೆ. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ನಾಡು ಸದಾಶಿವರಾಯರು ಸಲ್ಲಿಸಿದ ಸೇವೆಯನ್ನು ಎಲ್ಲರೂ ಸ್ಮರಿಸಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ರಾಷ್ಟ್ರೀಯ ಪ್ರಜ್ಞೆ ಇತ್ತು ಎನ್ನುವ ಅಂಶವನ್ನು ಮನದಟ್ಟು ಮಾಡಲಾಗಿದೆ. ಆ ಕೀರ್ತಿಯನ್ನು ದೇಶದಲ್ಲಿ ಪಸರಿಸುವಂತೆ ಮಾಡಿದ ಕಾರ್ನಾಡು ಸದಾಶಿವರಾಯರ ಹೋರಾಟ, ಯುವ ಜನತೆಗೆ ಪ್ರೇರಕವಾದ ಅಂಶಗಳನ್ನು ವ್ಯಕ್ತಪಡಿಸಲಾಗಿದೆ. ಕಲಿಯುಗದ ಕರ್ಣನ ತ್ಯಾಗಮಯ ಜೀವನಕ್ಕೆ ಪ್ರಾಶಸ್ತ್ಯವನ್ನೂ ನೀಡಲಾಗಿದೆ. ಈ ಎಲ್ಲಾ ಸಾಧನೆಗಳಿಂದ ಕಾರ್ನಾಡು ಸದಾಶಿವರಾಯರು ಕರಾವಳಿಯ ಗಾಂಧೀ, ದಕ್ಷಿಣದ ಗಾಂಧಿ ಎಂದು ಕರೆಸಿಕೊಂಡಿದ್ದಾರೆ ಎಂಬುದಾಗಿ ವಿವರಿಸಲಾಗಿದೆ. ಕಾದಂಬರಿಗಳಲ್ಲಿ ಕಾರ್ನಾಡು ಸದಾಶಿವರಾಯರನ್ನು ಪ್ರತಿಬಿಂಬಿಸಿರುವ ಕುರಿತಾಗಿ ಐತಿಹಾಸಿಕವಾದ ವಿವರಣೆಯನ್ನು ಕಂಡುಕೊಳ್ಳಲಾಗಿದೆ.